Mr. SPEAKER.—Of course, I understand the valuble suggestion of the Hon'ble Member Sri Puttanna. It is not fair that some members should get more time-proportionately more time than others. That is why, in order to avoid embarassment both to myself and to Members, I am thinking of fixing a time-limit from now on. Any way, it does happen that at the end, I will have to curtail time. It does happen, because too many members want to take part and they even make the request that they will take only five minutes. It happens not only here, but it happens every where. I want to know whether we should fix some time limit in each case except in the case of Leader of the House who will be given more time. In other cases, I will have to stick to the time-limit. What would be the proper time?

Sri M. C. NARASIMHAN.—Thirty minutes, at least for those who move amendments would be necessary Sir. It is even possible that some members may not utilise the full time given to them. That would be the upperlimit. Not more than 30 minutes.

Mr. SPEAKER.—Can I put it at 20 minutes, except in the case of the first speech and that of the Leader of the Opposition?

Sri H. M. CHANNABASAPPA.—That would be all right.

Sri M. C. NARASIMHAN.—Sir, in view of the changes that have taken place, I understand there are not likely to be more members anxious to speak on the other side.

ಶ್ರೀ ಎ. ವಿ. ನರಸಿಂಹರೆಡ್ಡಿ.—ಸ್ವಾಮಿ, ನಮ್ಮ ಎರಡನೇಯ ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ 625 ಹಳ್ಳಿಗಳಿಗೂ ಪಟ್ಟಣಗಳಿಗೂ ವಿದ್ಯುಚ್ಛಕ್ತಿಯನ್ನು ಒದಗಿಸಲಾಗಿದೆ. 330 ಮೈಲಿ ಉದ್ದದ ವಿದ್ಯುಚ್ಛಕ್ತಿ ಲೈನನ್ನು ಎಳೆಯಲಾಯಿತು. 1200 ಮೈಲ ಉದ್ದದ ರಸ್ತೆಗೆ ಜಲ್ಲಿ ಹಾಕಿಸಲಾಯಿತು. 5000 ಹೊಸ ಪ್ರಾಥಮಿಕ ಶಾಲೆಗಳನ್ನು 70 ಪ್ರೌಢಶಾಲೆಗಳನ್ನು ಪ್ರಾರಂಭಿಸಲಾಗಿದೆ. 68 ಹೈಯರ್ ಸೆಕೆಂಡರಿ ಶಾಲೆಗಳು 44 ವಿವಿಧೋದ್ದೇಶ ಶಾಲೆಗಳು, 11 ಪಾಲಿಟೆಕ್ನಿಕ್ ಶಾಲೆಗಳು, 3 ಎಂಜಿನಿಯರಿಂಗ್ ಶಾಲೆಗಳು ಒಂದು ವೈದ್ಯಕೀಯ ಕಾಲೇಜು ಸ್ಥಾಪಿತವಾಗಿವೆ. ಯೋಜನೆಗೆ ಒದಗಿಸಿದ ಹಣದಲ್ಲಿ ಶೇಕಡ 85 ರಷ್ಟು ಹಣವನ್ನು ಖರ್ಚು ಮಾಡಿದೆ. ಎರಡನೇ ಯೋಜನೆಯಲ್ಲಿ ಶೇಕಡ 95 ರಿಂದ 97 ರಷ್ಟು ಭಾಗ ಹಣ ಖರ್ಚಾಗಿದೆ. ಎರಡನೇ ಪಂಚವಾರ್ಷಿಕ ಯೋಜನೆಯ ಕಾರ್ಯಗಳನ್ನು ಕಾರ್ಯಗತ ಮಾಡಿರತಕ್ಕಂಥಾದ್ದು ಮತ್ತು ಅವುಗಳ ಬಗ್ಗೆ ರಾಜ್ಯಸರ್ಕಾರಕ್ಕೆ ರಾಜ್ಯಪಾಲರವರು ಸೂಚನೆಗಳನ್ನು ಕೊಟ್ಟಿದ್ದಾರೆ. ಯೋಜನೆಯ ಮೊದಲಿನ ಎರಡು ವರ್ಷ ಕೆಲಸಕಾರ್ಯಗಳು ಅನಿವಾರ್ಯವಾಗಿ ಮಂದಗತಿಯಲ್ಲಿ ನಡೆದರೂ ಕೊನೆಯ ಮೂರು ವರ್ಷಗಳಲ್ಲಿ ಬಹಳ ಚುರುಕಾಗಿ ಕೆಲಸ ನಡೆದಿದೆ. ಆದುದರಿಂದ ಸರಕಾರ ಮೆಚ್ಚಿಗೆಗೆ ಪಾತ್ರವಾಗಿದೆ ಎಂದು ಅವರು ಹೇಳಿದ್ದಾರೆ.

ಇನ್ನು ಮುಂದೆ ಮೂರನೇ ಪಂಚವಾರ್ಷಿಕ ಯೋಜನೆಯ ಬಗ್ಗೆ ಪ್ರಸ್ತಾಪ ಮಾಡಲು ನಾನು ಬಯಸುತ್ತೇನೆ.

ಮೂರನೆಯ ಪಂಚವಾರ್ಷಿಕ ಯೋಜನೆ ಏಪ್ರಿಲ್ ಒಂದನೆಯ ತಾರೀಖಿಗೆ ಪ್ರಾರಂಭ ವಾಗುತ್ತದೆ. ಇದಕ್ಕೆ 250 ಕೋಟಿ ರೂಪಾಯಿಗಳನ್ನೊದಗಿಸಲು ಕೇಂದ್ರ ಯೋಜನಾ ಮಂಡಳಿಯವರು ಒಪ್ಪಿಕೊಂಡಿದ್ದಾರೆ. ಈ ಯೋಜನೆಯನ್ನು ಮುಂದಿನ ಐದು ವರ್ಷಗಳಲ್ಲಿ ಕಾರ್ಯಗತ ಮಾಡಬೇಕು. ಹಾಗೆ ಮಾಡುವಾಗ ಯಾವ ಫಲಗಳು ನಮ್ಮ ಸಂಸ್ಥಾನದ ಜನತೆಗೆ ಉಂಟಾಗುತ್ತವೆನ್ನುವುದನ್ನು ರಾಜ್ಯಪಾಲರ ಭಾಷಣದಲ್ಲಿ ಸೂಕ್ಷ್ಮವಾಗಿ ತಿಳಿಸಿದ್ದಾರೆ.

ಇಲ್ಲಿಯತನಕ ಆಡಳಿತ ಪಕ್ಷದಲ್ಲಿ ಒಂದು ಚರ್ಚಾಸ್ಪದವಾದ, ವಿವಾದಕ್ಕೆ ಆಸ್ಪದವಾದ ಕೆಲವು ವಿಷಯಗಳಿದ್ದುವು. ಅನೇಕ ಸ್ನೇಹಿತರು ಅದರ ಬಗ್ಗೆ ಬಹಳ ದೊಡ್ಡದಾಗಿ ಹೇಳುತ್ತಿದ್ದರು. ಪ್ರಜಾಪ್ರಭುತ್ವ ತತ್ವಗಳ ಆಧಾರದ ಮೇಲೆ ನಡೆಯತಕ್ಕ ಪಕ್ಷ—ಆಡಳಿತ ಪಕ್ಷವೇ ಆಗಲೀ, ವಿರೋಧ ಪಕ್ಷವೇ ಆಗಲಿ—ಅದರ ವಿಚಾರದಲ್ಲಿ ಅಭಿಪ್ರಾಯಗಳನ್ನು ವ್ಯಕ್ತಮಾಡುವಾಗ ವಿಷಯಗಳನ್ನು ದೊಡ್ಡದು ಮಾಡಿ ದೇಶಕ್ಕೆ ಕೆಡುಕನ್ನುಂಟುಮಾಡುವ ಪರಿಸ್ಥಿತಿ ಬರುತ್ತದೆ ಎನ್ನುವ ರೀತಿಯಲ್ಲಿ ಹೇಳತಕ್ಕದ್ದು ಎಷ್ಟುಮಟ್ಟಿಗೆ ಸೂಕ್ತವೆನ್ನು ವುದನ್ನು ಯೋಚನೆ ಮಾಡಬೇಕು. ಆಡಳಿತ ಪಕ್ಷದವರಿಂದ ನಾವೂ ಕೂಡ ಎಲ್ಲಿಯತನಕ ನಮ್ಮಲ್ಲಿರುವ ವಿವಾದಗಳನ್ನು ಚರ್ಚೆ ಮಾಡಿ ಇತ್ಯರ್ಥ ಮಾಡಿಕೊಂಡಿದ್ದೇವೆ. ಮೂರನೆಯ ಪಂಚವಾರ್ಷಿಕ ಯೋಜನೆಯ ಕೆಲಸಗಳನ್ನು ಮಾಡಲು ಹೊರಡುವಾಗ ಅಂತರಂಗವಾಗಿ ಮತ್ತು ಬಹಿರಂಗವಾಗಿ ಏಕೀಕರಿಸಿ ಕೆಲಸ ಮಾಡುವ ಸಾಮರ್ಥ್ಯವನ್ನು ಪಡೆದಿದ್ದೇವೆ. ಆಡಳಿತ ಪಕ್ಷ ಅನೈಕಮತ್ಯದಿಂದ ಕೂಡಿದೆ ಎನ್ನುವ ಆಪಾದನೆಯನ್ನು ಈಗ ಹೊರಿಸುವುದಕ್ಕೆ ಸಾಧ್ಯವಿಲ್ಲ. ಒಂದು ಪಕ್ಷ ಆಡಳಿತದಲ್ಲಿರುವಾಗ ರಚನಾತ್ಮಕವಾಗಿ ಯೋಚನೆ ಮಾಡಿ ಅದು ಮಾಡುತ್ತ ಇರುವ ಕೆಲಸಗಳಲ್ಲಿ ಏನು ನ್ಯೂನತೆಗಳಿವೆ ಎಂಬುದನ್ನು ದೇಶದ ಹಿತದೃಷ್ಟಿಯಿಂದ, ಜನತೆಯ ಹಿತದೃಷ್ಟಿಯಿಂದ ಸಲಹೆಗಳನ್ನು ಕೊಡಬೇಕು. ರಚನಾತ್ಮಕವಾದ ಸಲಹೆಗಳನ್ನು, ಆಡಳಿತ ಪಕ್ಷ ಬಹುಮತದಲ್ಲಿದ್ದರೂ ಕೂಡ, ಸ್ವೀಕಾರ ಮಾಡಬೇಕು ಮತ್ತು ಆ ರೀತಿ ಮಾಡುತ್ತಿದೆ ವಿರೋಧ ಪಕ್ಷದವರು ಕಡಮೆ ಸಂಖ್ಯೆಯಲ್ಲಿದ್ದರೂ ಕೂಡ ಅವರ ಭಾವನೆಗಳಿಗೆ ಮತ್ತು ಸಲಹೆಗಳಿಗೆ ಸಾಕಷ್ಟು ಗಮನವನ್ನು ಆಡಳಿತದಲ್ಲಿರುವ ಪಕ್ಷ ಕೊಟ್ಟು ಸ್ವೀಕಾರ ಮಾಡಬೇಕು. ಈ ಒಂದು ಸಂಪ್ರದಾಯವನ್ನು ಮೈಸೂರು ಸಂಸ್ಥಾನದಲ್ಲಿ ಬಹಳ ಚೆನ್ನಾಗಿ ನಡೆಸಿಕೊಂಡು ಬಂದಿದ್ದೇವೆ ಎನ್ನುವುದಕ್ಕೆ ಅನೇಕ ಉದಾಹರಣೆಗಳನ್ನು ಹೇಳಬಲ್ಲೆ. ನಾನು

ಅಂಕಿಅಂಶಗಳ ಆಧಾರದಿಂದ ಹೇಳುತ್ತಿದ್ದೇನೆ. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಏನು ಸಾಧನೆ ಮಾಡಿದ್ದೇವೆ ಎನ್ನುವುದಕ್ಕೆ ಅಂಕಿಅಂಶಗಳನ್ನು ಕೊಟ್ಟಿದ್ದಾರೆ. ಮೂರನೆಯ ಪಂಚವಾರ್ಷಿಕ ಯೋಜನೆಯ ಕರಡು ಪ್ರತಿ ಪ್ರತಿಯೊಬ್ಬರ ಹತ್ತಿರವೂ ಇದೆ. ಅದರಲ್ಲಿ ಮುಂದೆ ತೆಗೆದುಕೊಳ್ಳಲಾಗುವ ಕಾರ್ಯಗಳನ್ನು ತಿಳಿಸಿದ್ದಾರೆ.

ನಮ್ಮ ರಾಜ್ಯಪಾಲರು ಪ್ರಸ್ತಾಪ ಮಾಡಿರುವ ಹಾಗೆ ಸ್ಥಳೀಯ ಸಂಸ್ಥೆಗಳಿಗೆ ಅಧಿಕಾರವನ್ನು ವಿಕೇಂದ್ರೀಕರಣ ಮಾಡಿಕೊಟ್ಟಿದ್ದೇವೆ. ಅದು ಸುಖೀರಾಜ್ಯವನ್ನೂ ಸ್ಥಾಪನೆ ಮಾಡಲು ಒಂದು ಮಹತ್ತರವಾದ ಹೆಜ್ಜೆಯಾಗಿದೆ. ಇಡೀ ದೇಶದಲ್ಲಿ ಇದು ಸಮತಾವಾದ ಸಮಾಜ ರಚನೆಯಲ್ಲಿ ಒಂದು ಮುಖ್ಯ ಹೆಜ್ಜೆಯಾಗಿದೆ. ಸ್ಥಳೀಯ ಸಂಸ್ಥೆಗಳ ಕಾನೂನು ಪ್ರಕಾರ ಗ್ರಾಮಪಂಚಾಯಿತಿಗಳಲ್ಲಿ ಸಮಗ್ರ ಆಡಳಿತವನ್ನೂ ಅಲ್ಲಿಯ ಚುನಾಯಿತ ಖಾಸಗಿ ಪ್ರತಿನಿಧಿಗಳಿಗೆ ವಹಿಸಿ ಅವರಿಗೆ ಬೇಕಾದ ಸೌಕರ್ಯಗಳನ್ನು ಸಾಧನ ಮಾಡಿಕೊಡುವುದಕ್ಕೆ ಅವಶ್ಯಕವಾದ ಅಧಿಕಾರವನ್ನೂ ಹಣವನ್ನೂ ಕೊಟ್ಟಿದ್ದಾರೆ. ಹಾಗೆಯೇ ಪ್ರತಿಯೊಂದು ಗ್ರಾಮಪಂಚಾಯಿತಿಯಲ್ಲಿಯೂ ಸೇವಾ ಸಹಕಾರ ಸಂಘಗಳು ಸ್ಥಾಪನೆಯಾಗಲು ಅನುಕೂಲ ವಾಗುವಂತೆ ನಮ್ಮ ರಾಜ್ಯದ ಸಹಕಾರಿ ಕಾನೂನನ್ನು ಯೋಗ್ಯವಾಗಿ ಈ ಸಭೆಯ ಸದಸ್ಯರಾದ ನಾವು ಮಾಡಿದ್ದೇವೆ. ಅದರ ಬಗ್ಗೆ ಸೂಕ್ಷ್ಮವಾಗಿ ಪ್ರಸ್ತಾಪ ಮಾಡಲು ಬಯಸುತ್ತೇನೆ.

ರಾಜ್ಯಪಾಲರ ಭಾಷಣದಲ್ಲಿ ಹೇಳಿರುವ ಹಾಗೆ 3727 ಸೇವಾ ಸಹಕಾರ ಸಂಘಗಳು ನಮ್ಮ ಸಂಸ್ಥಾನದಲ್ಲಿವೆ. ನಮ್ಮಲ್ಲಿ 7444 ಗ್ರಾಮ ಪಂಚಾಯಿತಿಗಳಿವೆ. ಪ್ರತಿಯೊಂದು ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿಯೂ ಒಂದೊಂದು ಸೇವಾ ಸಹಕಾರ ಸಂಘದ ರಚನೆ ಯಾಗಬೇಕೆಂದು ಈಗಿರುವ ಸಹಕಾರಿ ಕಾನೂನು ಮೂಲಕ ಒಪ್ಪಿಕೊಂಡಿದ್ದೇವೆ. ಆ ರೀತಿಯಾಗಿ ರಚನೆಯಾದ ಮೇಲೆ ಆಯಾ ಗ್ರಾಮಕ್ಕೆ ಬೇಕಾದ, ಗ್ರಾಮ ಜೀವನಕ್ಕೆ ಬೇಕಾದ ಅವಶ್ಯಕ ವಸ್ತುಗಳ ಪೂರೈಕೆಯನ್ನು ಈ ಸೇವಾ ಸಹಕಾರ ಸಂಘಗಳು ಮಾಡಬೇಕೆಂಬುದೇ ಮುಖ್ಯ ಉದ್ದೇಶ. ಈ ದಿವಸ ಈ ಸಹಕಾರ ಸಂಘಗಳು ಕೇವಲ ಸಾಲವನ್ನು ಕೊಡತಕ್ಕ ಸಾಧನ ಗಳಾಗಿವೆ. ಈ ಸಂಘಗಳನ್ನು ಸಮಗ್ರ ರೀತಿಯಿಂದ ಬೆಳಸಿಕೊಂಡು ಸಮತಾವಾದ ಸಮಾಜದ ರಚನೆ ಮಾಡಬೇಕಾಗಿದೆ. ರಾಜ್ಯಾಂಗದಲ್ಲಿ ಇರುವಂತೆ ಸಮತಾವಾದ ಸಮಾಜ ರಚನೆಯಾಗ ಬೇಕೆಂಬುದನ್ನು ಒಪ್ಪಿಕೊಂಡಿದ್ದೇವೆ. ಈ ಉದ್ದೇಶದಿಂದಲೇ ಪ್ರತಿಯೊಂದು ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿಯೂ ಒಂದೊಂದು ಸೇವಾ ಸಹಕಾರ ಸಂಘವಾಗಬೇಕೆಂದು ಕಾನೂನನ್ನು ಒಪ್ಪಿಕೊಂಡಿದ್ದೇವೆ. ಮಾರಾಟ ಸಂಗ್ರಹ ಮತ್ತು ಮಾರುಕಟ್ಟೆ ಈ ಕೆಲಸಗಳನ್ನು ಸಹಕಾರ ಸಂಘಗಳೇ ನಡೆಸಬೇಕು. ಮತ್ತು ಸಂಸ್ಥಾನದ ಕೇಂದ್ರದಲ್ಲಿ ಮೂರು ದೊಡ್ಡ ಸಂಸ್ಥೆಗಳನ್ನು ಮಾಡಿ ಅವುಗಳಲ್ಲಿ ಒಂದು ಅಲ್ಪಕಾಲಾವಧಿ ಮತ್ತು ಮಧ್ಯಮ ಕಾಲಾವಧಿ ಸಾಲಗಳನ್ನು ಮತ್ತು ಮಾರುಕಟ್ಟೆಗೆ ಬೇಕಾದ ಸಾಲಗಳನ್ನು ಒದಗಿಸತಕ್ಕದ್ದು; ಮತ್ತೊಂದು ದೀರ್ಘಾವಧಿ ಸಾಲಗಳನ್ನು ಒದಗಿಸತಕ್ಕದ್ದು, ಇನ್ನೊಂದು ನೀರಾವರಿ ಸೌಕರ್ಯಗಳನ್ನು ಪಡೆಯಲು ಸಾಲಗಳನ್ನು ಒದಗಿಸತಕ್ಕದ್ದು. ನಮ್ಮ ಮಾರುಕಟ್ಟೆಯಲ್ಲಿ ಹೇರಳವಾಗಿರುವ ವಸ್ತುಗಳನ್ನು ಇತರ ಕಡೆಗೆ ಕಳಿಸಿ ನಮ್ಮಲ್ಲಿ ತಯಾರಾಗುವ ವಸ್ತುಗಳನ್ನು ಇತರ ಕಡೆ ಮಾರಾಟವಾಗಲು ವ್ಯವಸ್ಥೆ ಮಾಡಿ, ನಮ್ಮಲ್ಲಿ ಕೊರತೆಯಿರುವ ವಸ್ತುಗಳನ್ನು ಹೊರಗಡೆಯಿಂದ ತರಿಸಿಕೊಂಡು ಹಂಚುವ ವ್ಯವಸ್ಥೆ ಮಾಡಬೇಕು. ಈ ರೀತಿ ಮಾಡುವಾಗ ಬರುವ ಲಾಭದಲ್ಲಿ ಇಡೀ ಸಮಾಜದ ಏಳಿಗೆಯಾಗುವಂತೆ ಮಾಡಬೇಕೆಂದು ಉದ್ದೇಶಿಸಲಾಗಿದೆ.

4 P. M.

1954 ರಲ್ಲಿ ವ್ಯವಸಾಯಕ್ಕಾಗಿ ಸಂಸ್ಥಾನದ ಕೇಂದ್ರ ಅಪೆಕ್ಸ್ ಬ್ಯಾಂಕಿನಿಂದ ರೈತರಿಗೆ ಸಾಲಗಳನ್ನು ಒದಗಿಸಿಕೊಡಲಾಯಿತು. ರಿಸರ್ವ್ ಬ್ಯಾಂಕಿನಿಂದ ಸುಮಾರು ಇಪ್ಪತ್ತಾರು

(ಶ್ರೀ ಎ. ವಿ. ನರಸಿಂಹರೆಡ್ಡಿ)

ಲಕ್ಷರೂಪಾಯಿಗಳಷ್ಟು ಹಣವನ್ನು ಅಲ್ಪಕಾಲವಧಿ ಸಾಲವಾಗಿ ರೈತರಿಗೆ ಕೊಡಲಾಯಿತು. ಈ ವರ್ಷದಲ್ಲಿ ರಿಸರ್ವ್ ಬ್ಯಾಂಕಿನಿಂದ ಸುಮಾರು ಒಂಬತ್ತು ಕಾಲು ಕೋಟಿ ರೂಪಾಯಿಗಳಷ್ಟು ಹಣವನ್ನು ಸಂಸ್ಥಾನದ ರೈತರಿಗೆ ಹಂಚಿದ್ದಾರೆ. ಇದರ ಜೊತೆಗೆ ಇನ್ನೊಂದು ವಿಚಾರವನ್ನು ತಮಗೆ ತಿಳಿಸಬೇಕಾಗಿದೆ. ಈಚೆಗೆ ರಿಸರ್ವ್ ಬ್ಯಾಂಕಿನವರು Rural Credit Survey Report ಎನ್ನುವುದನ್ನು ಪ್ರಕಟಿಸಿದ್ದಾರೆ. ಇದರ ಪ್ರಕಾರ ನೋಡಿದರೆ, ದೇಶದಲ್ಲಿರುವ ಬಂಡವಾಳಶಾಹಿ ಜನಗಳಿಂದ ರೈತರ ಶೋಷಣೆ ಹೇಗೆ ನಡೆಯುತ್ತದೆ ಎನ್ನುವುದು ಗೊತ್ತಾಗುತ್ತದೆ. ಹಳ್ಳಿಗಾಡಿನಲ್ಲಿ ಜನ ಒಂದು ನೂರು ರೂಪಾಯಿಗಳ ಸಾಲಪಡೆಯಲು ಹನ್ನೆರಡಾಣೆಯಿಂದ ಹಿಡಿದು ಐದು ರೂಪಾಯಿಗಳವರೆಗೆ ಬಡ್ಡಿಯನ್ನು ಕೊಡುತ್ತಿದ್ದಾರೆ. ಹೀಗೆ ಕಷ್ಟಪಡುತ್ತಿರುವ ಈ ಜನಗಳ ಕಷ್ಟವನ್ನು ತಪ್ಪಿಸಲು ಅಲ್ಪಕಾಲವಧಿ, ಮಧ್ಯಮಾವಧಿ ಸಾಲಗಳನ್ನು ಕಡಿಮೆ ದರದ ಬಡ್ಡಿಯಲ್ಲಿ ಕೊಟ್ಟು ಸಹಾಯಮಾಡಬೇಕೆಂದು ಈಗಾಗಲೇ ಸುಮಾರು ಹನ್ನೆರಡು ಕೋಟಿಯಷ್ಟು ಹಣವನ್ನು ಸಾಲವಾಗಿಕೊಡಲಾಗಿದೆ. ಈ ಸೇವಾಸಹಕಾರಿ ಸಂಘಗಳಮೂಲಕ ನೂರು ರೂಪಾಯಿಗಳಿಗೆ 0–9–5 ನಂತೆ ಬಡ್ಡಿ ದರದಲ್ಲಿ ಸಾಲವನ್ನು ಒದಗಿಸಲಾಗುತ್ತಿದೆ. ನಮ್ಮಲ್ಲಿ ಸುಮಾರು 25.9 ಸಾವಿರ ಹಳ್ಳಿಗಳಿವೆ. ಮತ್ತು 288 ಪಟ್ಟಣಗಳಲ್ಲಿ 2 ಕೋಟಿ 20 ಲಕ್ಷ ಜನರು ವಾಸವಾಗಿದ್ದಾರೆ. 1941 ರಿಂದ 1951ರ ವರೆಗೆ ಶೇಕಡ 19.3 ರಷ್ಟು ಜನಸಂಖ್ಯೆ ಹೆಚ್ಚುತ್ತಿದೆ. ಹೆಚ್ಚುವ ಜನಸಂಖ್ಯೆಯನ್ನು ದೃಷ್ಟಿಯಲ್ಲಿಟ್ಟು ಇರುವಜನಸಂಖ್ಯೆಸೇರಿಸಿ ಅವರಿಗೆ ನಿತ್ಯಜೀವನದಲ್ಲಿ ಸುಖೀಜೀವನಕ್ಕೆ ಬೇಕಾದ ಅವಶ್ಯವಸ್ತುಗಳ ಉತ್ಪಾದನೆ ಮಾಡುವುದೇ ಸ್ವಾತಂತ್ರ್ಯಜನತೆಯ ಆರ್ಥಿಕ ಯೋಜನೆಗಳ ಗುರಿ. ಆ ಹಿನ್ನೆಲೆಯಿಂದ ಸಿದ್ಧಮಾಡಿರುವ ಯೋಜನೆಯನ್ನು ಕಾರ್ಯಗತಮಾಡಿದರೆ ಆ ದೆಸೆಯಲ್ಲಿ ನಾವು ಪ್ರಗತಿಧಾಯಕವಾಗಿ ಮುಂದುವರಿದಂತೆಯೇ ಬಡ ಜನಗಳ ಶೋಷಣೆ ತಪ್ಪಲಿ, ರಾಜ್ಯವು ಸುಖೀರಾಜ್ಯವಾಗಲಿ ಎಂದು ಈ ರೀತಿಸಹಾಯಗಳನ್ನು ಒದಗಿಸಲಾಗುತ್ತಿದೆ. ಇದರ ಶೇಕಡವಾರು ಸುಮಾರು ಆರುಕಾಲರಿಂದ ಏಳರವರೆಗೆ ಹೋಗಬಹುದು. ಇದೆಲ್ಲಾ ಈ ಮೇಲೆ ಹೇಳಿದ ರಿಪೋರ್ಟಿನಲ್ಲಿದೆ. ಬಡ ಜನರ ಅನುಕೂಲಕ್ಕಾಗಿ ಮತ್ತು ಹೆಚ್ಚಿನ ಅನುಕೂಲವನ್ನು ಕಲ್ಪಿಸುವುದಕ್ಕಾಗಿ ರಿಸರ್ವ್ ಬ್ಯಾಂಕಿನಿಂದ ಸುಮಾರು ಒಂಭತ್ತು ಕಾಲು ಕೋಟಿ, ಅಪೆಕ್ಸ್ ಬ್ಯಾಂಕಿನ ಸ್ವಂತ ಹಣದಿಂದ ಸ್ವಲ್ಪಹಣವನ್ನು ಜಿಲ್ಲೆಗಳಲ್ಲಿರುವ ಲ್ಯಾಂಡ್ ಮಾರ್ಟ್‌ಗೇಜು ಬ್ಯಾಂಕುಗಳಿಗೆ ಒದಗಿಸಿ ಸುಮಾರು ಎಪ್ಪತ್ತೈದು ಲಕ್ಷರೂಪಾಯಿಗಳಷ್ಟು ಹಣವನ್ನು ಸಾಲವಾಗಿ ಕೊಟ್ಟು ಮಧ್ಯವರ್ತಿ ಜನಗಳ ಶೋಷಣೆಯನ್ನು ತಪ್ಪಿಸಲು ಎಷ್ಟುವೇಗದಿಂಧ ಕೆಲಸಮಾಡುತ್ತಿದ್ದೇವೆ ಎನ್ನುವುದು ಇದರಿಂದ ಗೊತ್ತಾಗುತ್ತದೆ. 1959 ನೇ ಸಾಲಿನಲ್ಲಿ ರಿಸರ್ವ್ ಬ್ಯಾಂಕಿನಿಂದ ಸುಮಾರು ಎಂಟೂವರೆ ಕೋಟಿ ರೂಪಾಯಿಗಳನ್ನು ಸಾಲವಾಗಿ ಕೊಡಲಾಗಿದೆ. ಹೀಗೆ ರೈತರಿಗೆ ಕೊಟ್ಟಿರುವ ಸಾಲದ ಹಣ ರೈತರಿಂದ ಸರಿಯಾಗಿ ವಸೂಲಾಗುತ್ತಿಲ್ಲ ಎಂದು ಇಲ್ಲಿ ತಂದಿರುವ ಕೆಲವು ತಿದ್ದುಪಡಿಗಳಲ್ಲಿ ಸೂಚಿಸಲಾಗಿದೆ. ನಾನು ಅಪೆಕ್ಸ್ ಬ್ಯಾಂಕಿನ ಅಧ್ಯಕ್ಷನಾಗಿರುವುದರಿಂದ ಇದರ ವಿವರಗಳನ್ನು ಸಾಕಷ್ಟು ತಿಳಿದುಕೊಂಡಿದ್ದೇನೆ. ಈಗಾಗಲೇ ಕೊಟ್ಟಿರುವ ಹಣವನ್ನು ಕೊನೆಯ ನಯಾಪೈಸದವರಿಗೂ ವಸೂಲಿಮಾಡುತ್ತಲೇ ಇದ್ದೇವೆ. ಸುಮಾರು 70–80 ಲಕ್ಷ ರೂಪಾಯಿಗಳಷ್ಟು ಹಣವನ್ನು ಜಿಲ್ಲಾಬ್ಯಾಂಕುಗಳಿಂದ ವಸೂಲು ಮಾಡಲಾಗಿದೆ. ಜಿಲ್ಲಾಬ್ಯಾಂಕಿನವರು ಪ್ರೈಮರಿ ಬ್ಯಾಂಕಿನಿಂದ ವಸೂಲಿಮಾಡಿದಾಗ ಅಲ್ಪಸ್ವಲ್ಪ ನಷ್ಟವಾಗಿರುವುದುಂಟು. ಇದು ಸುಮಾರು ಶೇಕಡಾ ಐದರಿಂದ ಹತ್ತಕ್ಕೆ ಮೇಲ್ಪಟ್ಟು ಹೋಗಿಲ್ಲ. ಇದನ್ನೇ ದೊಡ್ಡದು ಮಾಡಿಕೊಂಡು ಈಗ ದೇಶದಲ್ಲಿ ತಂದಿರುವ ಸಹಕಾರದ ಕಾನೂನು ಸರಿಯಾಗಿಲ್ಲ, ಉಪಯೋಗವಾಗುತ್ತಿಲ್ಲ ಎಂದು ಹೇಳುವುದು ಸರಿಯಲ್ಲ. ನಮ್ಮ ಸಹಕಾರ ಸಂಘಗಳಲ್ಲಿ ಷೇರು ಬಂಡವಾಳ ಹಾಕಿರುವ ಷೇರುದಾರರಿಗೆ ಡಿವಿಡೆಂಟ್ ಎಂದು ಕೊಡಲಾಗುತ್ತಿದೆ. ಇದರ ಜೋತೆಗೆ ಸಹಕಾರಿ ಸಂಸ್ಥೆಗಳು ಇನ್ನೂ ಚೆನ್ನಾಗಿ ಬೆಳೆಯ ಬೇಕಾಗಿದ್ದರೆ, ಸಾಮಾನ್ಯ ಜನತೆಯ ಬಳಕೆಗೆ ಬೇಕಾದ

ವಸ್ತುಗಳನ್ನು ಸಹಕಾರ ಸಂಸ್ಥೆಗಳ ಮೂಲಕ ಸುಲಭ ಬೆಲೆಗೆ ದೊರಕಿಸಿಕೊಡಬೇಕು. ಹೀಗೆ ವ್ಯಾಪಾರಮಾಡುವಂತಹ ಸಂಘಗಳಿಗೆ ಬೋನಸ್ಸನ್ನು ಕೊಡಬಹುದು. ಆ ರೀತಿಯಾದ ಪದ್ಧತಿ ಪಾಶ್ಚಿಮಾತ್ಯದೇಶದಲ್ಲಿದೆ ಇಂತಹ ದೊಡ್ಡ ಜವಾಬ್ದಾರಿ ಸಹಕಾರ ಸಂಘಗಳ ಮೇಲೆ ಬಿದ್ದಿದೆ. ಇದರ ಲಾಭ ಹತ್ತೂ ಜನಕ್ಕೆ ಆಗುತ್ತದೆ. ಸಮತಾವಾದದ ತತ್ವದಮೇಲೆ ಇಂತಹ ಸೇವಾ ಸಹಕಾರ ಸಂಘಗಳನ್ನು ಬೆಳೆಸಿ ರೈತರಿಗೆ ಮತ್ತಿತರ ಸಾಮಾನ್ಯ ಜನತೆಗೆ ಸೌಕರ್ಯಗಳನ್ನು ಕಲ್ಪಿಸ ಬೇಕಾದುದು ಯೋಗ್ಯವಾದುದು.

ಕೈಗಾರಿಕಾ ಕ್ಷೇತ್ರದಲ್ಲಿ ನಮ್ಮಸಂಸ್ಥಾನ ಬೆಳೆಯುತ್ತಲೇಇದೆ. ಇದರಲ್ಲೀ ಅನುಮಾನವೇ ಇಲ್ಲ.

ನಮ್ಮ ಸಂಸ್ಥಾನವನ್ನು ಇವೊತ್ತಿನ ದಿವಸ ಬೇರೆ ಸಂಸ್ಥಾನಗಳೊಂದಿಗೆ ಹೋಲಿಸಿ ನೋಡಿದರೆ, ಮಾಲಿಕರುಗಳೂ ಮತ್ತು ಕಾರ್ಮಿಕರಿಗೂ ಮಧುರ ಸಂಪರ್ಕ ಇರುವುದು ಚೆನ್ನಾಗಿ ವ್ಯಕ್ತವಾಗುತ್ತದೆ. ಬೇರೆ ಸಂಸ್ಥಾನಗಳಲ್ಲಿ ಕಾರ್ಮಿಕರಿಗೂ ಮತ್ತು ಮಾಲೀಕರುಗಳಿಗೂ ನಡುವೇ ಇರುವ ಸ್ಟ್ರೈಕುಗಳು, Man Hours, ಇತ್ಯಾದಿಗಳನ್ನು ಲೆಕ್ಕಾಚಾರ ಹಾಕಿ ನೋಡಿದರೆ ಇಡೀರಾಷ್ಟ್ರದಲ್ಲಿ ನಮ್ಮ ರಾಷ್ಟ್ರಮೊದಲನೆಯದು ಎಂದು ನನಗೆ ಸಮಾಚಾರ ಸಿಕ್ಕಿದೆ. ಹೀಗೆ ಕಾರ್ಮಿಕರ ಮತ್ತು ಮಾಲೀಕರ ನಡುವೆ ಸಂಪರ್ಕ ತೃಪ್ತಿಕರ ವಾಗಿರುವುದರಿಂದ ನಾವು ಉತ್ಪನ್ನಮಾಡುವ ಪದಾರ್ಥಗಳೂ ಹೆಚ್ಚಾಗಿಮಾಡಲು ಯೋಜನೆಯ ಕಾರ್ಯಗಳು ಹೆಚ್ಚಿನ ವೇಗದಲ್ಲಿ ನಡೆಯುತ್ತಿವೆ.

† ಶ್ರೀ ಜೆ. ಬಿ. ಮಲ್ಲಾರಾಧ್ಯ.— ಮೂರನೆ ಯೋಜನೆ ಫಲವಾಗಿ ಉತ್ಪತ್ತಿ ಎಷ್ಟು ಹೆಚ್ಚಿದೆ? ಮತ್ತು ಯಾವ ಪ್ರಮಾಣದಲ್ಲಿ ಎನ್ನುವುದರ ಬಗೆಗೆ ಮಾನ್ಯ ಸದಸ್ಯರು ಒಂದು ಪಟ್ಟಿಯನ್ನು ಕೊಟ್ಟರೆ ಚೆನ್ನಾಗಿರುತ್ತದೆ.

Sri H. M. CHANNABASAPPA.— I would like to submit this. The Honourable Members' anxiety will be borne in mind and at the time we reply, at the appropriate time, the figures will be furnished.

Mr. SPEAKER.— Does it mean that the Hon'ble Member moving the motion has no right to say anything?

Sri C. J. MUCKANNAPPA.— Let him give a satisfactory reply.

Mr. SPEAKER.— He is not here to give a reply; he is here to make a statement.

ಶ್ರೀ ಎ. ವಿ. ನರಸಿಂಹರೆಡ್ಡಿ.— ನಮ್ಮ ಸಂಸ್ಥಾನದ ಹಣಕಾಸಿನ ಪರಿಸ್ಥಿತಿ ಚೆನ್ನಾಗಿದೆ. ಮೂರನೇ ಪಂಚವಾರ್ಷಿಕ ಯೋಜನೆಗೆ ಬೇಕಾದಂತಹ ಹಣವನ್ನು ನಮ್ಮ ಸಂಸ್ಥಾನದ ಅವಶ್ಯಕಥೆ ಗಳಿಗನುಗುಣವಾಗಿ ಕೇಂದ್ರ ಸರಕಾರದವರು ಒದಗಿಸುತ್ತಿರುವುದು ಅನೇಕರಿಗೆ ಗೊತ್ತಿರಬಹುದು. ಅದರ ಬಗ್ಗೆನಾನು ಕೆಲವು ಅಂಕೆ ಅಂಶಗಳನ್ನು ಕೊಡಬಯಸುತ್ತೇನೆ. ನಮ್ಮ ಸಂಸ್ಥಾನಕ್ಕೆ ಮತ್ತು ಕೇಂದ್ರಸರಕಾರಕ್ಕೆ ಒಂದು ಸುಭದ್ರವಾದ ಮಧುರ ಬಾಂಧವ್ಯ ಮತ್ತು ಸಹಕಾರ ಚೆನ್ನಾಗಿ ಬೆಳೆಯುತ್ತಾ ಬಂದಿದೆ.

ನಮ್ಮ ನಿರೀಕ್ಷೆಯಂತೆ ಕೇಂದ್ರದವರು ಸಾಕಷ್ಟು ಸಹಾಯಗಳನ್ನು ಒದಗಿಸಿದ್ದಾರೆ. ಇದರ ಅಂಕೆ ಅಂಶಗಳಂತೆ ಈಗಾಗಲೇ ನಾವು ಮೊದಲನೆ ಮತ್ತು ಎರಡನೇಯೋಜನೆಯನ್ನು ಕಾರ್ಯಗತ ಮಾಡಲು ಈ ಶಾಸನ ಸಭೆಯಲ್ಲಿ ಈಗಾಗಲೇ ಚರ್ಚೆಮಾಡಿದ್ದೇವೆ. ಅದರಂತೆ ಕೇಂದ್ರ ಸರಕಾರವೂ ಸಾಕಷ್ಟು ಸಹಾಯವನ್ನು ಒದಗಿಸುತ್ತಿದ್ದಾರೆ. ಅದು ಒಂದು ಪ್ರಜಾಪ್ರಭುತ್ವದ ಲಕ್ಷಣ. ಆ ರೀತಿ ನಾವು ಎಲ್ಲರೂ ಮಾಡಬೇಕು. ಯಾವುದೋ ಒಂದು ಕಾರಣವನ್ನು ನೆವ ಮಾಡಿಕೊಂಡು ಎಲ್ಲರೂ ಒಟ್ಟಾಗಿ ನಮಗೆ ಸಾಕಷ್ಟು ಹಣ ಕೇಂದ್ರ

(ಶ್ರೀ ಎ. ವಿ. ನರಸಿಂಹರೆಡ್ಡಿ)

ಸರಕಾರ ದಿಂದ ಬರಲಿಲ್ಲವೆಂದು ಹೇಳಿದರೆ ಅದು ಅಪಚಾರವಾಗುತ್ತದೆ, ಆದ್ದರಿಂದ ನಾನು ಕೆಲವು ಅಂಕಿ ಅಂಶಗಳನ್ನು ಈ ಸಭೆಯಲ್ಲಿ ಕೊಡಬಯಸುತ್ತೇನೆ. ಕೇಂದ್ರಕ್ಕೆ ನಾವು ತೆರಿಗೆಗಳನ್ನು ಹಾಕತಕ್ಕ ಅನೇಕ ಇಲಾಖೆಗಳನ್ನು ಬಿಟ್ಟುಕೊಟ್ಟಿದ್ದೇವೆ. ಅದರ ಪರವಾಗಿ ಕೇಂದ್ರ ಸರ್ಕಾರ ನಮಗೆ ಎಷ್ಟು ಹಣ ಒಟ್ಟಾಗಿ ಕೊಡುತ್ತಾರೆ. ಎಷ್ಟು ನಮ್ಮ ಸಂಸ್ಥಾನಕ್ಕೆ ಹಣ ಬಂದಿದೆ ಎಂದು ಹೇಳುವುದು ಮುಖ್ಯವಾದ ವಿಚಾರ. 1957–58ನೇ ಸಾಲಿನಲ್ಲಿ 641.88 ಲಕ್ಷ ರೂಪಾಯಿಗಳನ್ನೂ, 58–59ನೇ ಸಾಲಿನಲ್ಲಿ 803.41 ಲಕ್ಷ ರೂಪಾಯಿಗಳನ್ನೂ, 59–60ನೇ ಸಾಲಿನಲ್ಲಿ 842.88 ಲಕ್ಷ ರೂಪಾಯಿಗಳನ್ನೂ, 60–61ನೇ ಸಾಲಿನಲ್ಲಿ 861.39 ಲಕ್ಷ ರೂಪಾಯಿಗಳನ್ನು ಕೊಟ್ಟರು. ನಮಗೆ ಬಂದ ಪಾಲನ್ನು ನಾನು ಹೇಳುತ್ತಿದ್ದೇನೆ. ಒಟ್ಟಿಗೆ ಎರಡನೆಯ ಪಾಂಚವಾರ್ಷಿಕ ಯೋಜನೆಯಲ್ಲಿ 44,56,98 ಸಾವಿರ ರೂಪಾಯಿಗಳು ಕೇಂದ್ರದಿಂದ ಬಂದಿದೆ. ಹಾಗೆಯೇ ನಮ್ಮ ದೇಶದ ಉತ್ಪನ್ನವನ್ನು ಸಹ ಹೆಚ್ಚುಮಾಡಿದ್ದಾರೆ. ನಾವು ತೆರಿಗೆಗಳನ್ನು ವಿಧಿಸಿದುದರ ಮೂಲಕ 1957–58 ನೇ ಸಾಲಿನಲ್ಲಿ 1,747.19 ಲಕ್ಷ ರೂಪಾಯಿಗಳೂ, 58–59ರಲ್ಲಿ 2,216.71 ಲಕ್ಷ ರೂಪಾಯಿಗಳೂ, 59–60ರಲ್ಲಿ 2,300.12 ಲಕ್ಷ ರೂಪಾಯಿಗಳೂ, 60–61ರಲ್ಲಿ 2,426.23 ಲಕ್ಷ ರೂಪಾಯಿಗಳೂ ಒಟ್ಟಿಗೆ 53, 50, 99 ಸಾವಿರ ರೂಪಾಯಿಗಳೂ ಆದಾಯ ಬಂದಿದೆ. ಆದರೆ ಇನ್ನು ನಾನ್–ಟ್ಯಾಕ್ಸ್ ರೆವಿನ್ಯೂ ಬಗ್ಗೆ ಹೆಚ್ಚಿಗೆ ವಿವರಗಳನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಒಟ್ಟು ಆ ಬಾಬಿನಿಂದ 56, 89,16 ಲಕ್ಷ ರೂಪಾಯಿಗಳ ಆದಾಯ ಬಂದಿದೆ. ಕೇಂದ್ರ ಸರ್ಕಾರದಿಂದ ಸ್ಟ್ಯಾಚುಟರಿ ಗ್ರ್ಯಾಂಟ್ ಮೂಲಕ ಬಂದಿರುವುದು 62, 51, 53 ಸಾವಿರ ರೂಪಾಯಿಗಳು, ಇತರ ಯೋಜನೆಗಳಿಗಾಗಿ ಕೇಂದ್ರ ಸರ್ಕಾರದಿಂದ ಬಂದಿರುವ ಹಣ 44, 56, 98 ಸಾವಿರ ರೂಪಾಯಿಗಳು. ಮುಖ್ಯವಾಗಿ ನಾವು ನಮ್ಮ ಸಂಸ್ಥಾನದಲ್ಲಿ ವಿಧಿಸಿರುವ ತೆರಿಗೆಗಳಿಗನುಸಾರವಾಗಿ ಅನೇಕ ಅಭಿವೃದ್ಧಿ ಕೆಲಸಗಳನ್ನು ಮಾಡಿಸಿರುತ್ತೇವೆ. ನಮ್ಮ ಆದಾಯ ಖರ್ಚುಗಳಿಗನುಗುಣವಾಗಿ ತೆರಿಗೆಗಳನ್ನು ಹಾಕಿದ್ದೇವೆ. ಅವರು ತೆರಿಗೆಗಳನ್ನು ಕೊಟ್ಟರೂ ಜನರಿಗೆ ತಕ್ಕ ಸೌಕರ್ಯಗಳನ್ನೂ ಸಹ ಒದಗಿಸುತ್ತಿದ್ದೇವೆ. ತೆರಿಗೆಗಳನ್ನು ಸರ್ಕಾರ ವಿಧಿಸಿರುವುದು ನ್ಯಾಯ ಸರಿ ಎಂದು ಜನರೇ ಹೇಳುವ ರೀತಿಯಲ್ಲಿದೆ. ನಾವು ಯಾವ ದೃಷ್ಟಿಯಿಂದಲೂ ಜನಗಳಿಗೆ ತೆರಿಗೆಗಳ ಮೂಲಕ ಕಿರುಕುಳವನ್ನು ಕೊಡುತ್ತಿಲ್ಲವೆಂದು ಹೇಳಿದರೆ ಅದೇನು ತಪ್ಪಾಗಲಾರದು, ಯಾಕೆಂದರೆ ನಾವು ನೆರೆಹೊರೆಯ ರಾಷ್ಟ್ರಗಳಲ್ಲಿ ತೆರಿಗೆಗಳನ್ನು ವಿಧಿಸಿರುವ ಕ್ರಮವನ್ನು ಇಲ್ಲಿಗೆ ಹೋಲಿಸಿ ನೋಡಿದರೆ ಅವರಿಗಿಂತ ನಮ್ಮದು ದುಬಾರಿಯಿಲ್ಲ, ನೆರೆಹೊರೆಯ ಪ್ರಾಂತಗಳಲ್ಲಿ ಯಾವ್ಯಾವ ಪದಾರ್ಥಗಳ ಮೇಲೆ ತೆರಿಗೆಗಳನ್ನು ಹಾಕಿದ್ದಾರೋ ಅಂಥಹ ಪದಾರ್ಥಗಳ ಪೈಕಿ ಅನೇಕ ಪದಾರ್ಥಗಳ ಮೇಲೆ ನಾವು ತೆರಿಗೆಗಳನ್ನು ವಿಧಿಸದೆ ಬಿಟ್ಟುಬಿಟ್ಟಿದ್ದೇವೆ. ಇದರಿಂದ ನಮ್ಮ ಪ್ಲಾನುಗಳು ಯಶಸ್ವಿಯಾಗುತ್ತವೆ. ನಮ್ಮ ಆದಾಯ ಹೆಚ್ಚುತ್ತದೆ. ಸಂಸ್ಥಾನದೊಳಗೆ ಉತ್ಪನ್ನವನ್ನು ವೃದ್ಧಿ ಮಾಡುವುದಕ್ಕೆ ಅವಕಾಶವಾಗುತ್ತದೆ. ಎಷ್ಟೋ ಸರಕುಗಳ ಮೇಲೆ ನೆರೆಹೊರೆಯ ಪ್ರಾಂತದವರು ತೆರಿಗೆಗಳನ್ನು ಹಾಕಿದ್ದರೂ ನಾವು ಆ ರೀತಿ ವಿಧಿಸಿಲ್ಲ. ಬೆಟರ್‌ಮೆಂಟ್ ಲೆವಿಯನ್ನೂ ನಾವು ಮಾಡಲಿಲ್ಲ. ಅದನ್ನು ಮುಂದೆ ಮಾಡಬೇಕಾಗಬಹುದು.

ಇನ್ನೊಂದು ವಿಷಯ. ಇವತ್ತೂ ರಿಜರ್ವ್ ಬ್ಯಾಂಕಿನಿಂದ ಎಲ್ಲಾ ಹಣವನ್ನೂ ಸಹಕಾರ ಸಂಸ್ಥೆಗಳಿಗಾಗಿ ಸಾಲವಾಗಿ ಪಡೆಯುತ್ತಿದ್ದೇವೆ. ಇಷ್ಟು ದಿವಸಗಳವರಿಗೂ ಅನೇಕ ಸಹಕಾರ ಸಂಸ್ಥೆಗಳು ಸಾಲವಾಗಿ ತೆಗೆದುಕೊಂಡಿದ್ದ ಹಣವನ್ನು ಇನ್ನೂ ಹಿಂದಕ್ಕೆ ಕೊಟ್ಟಿಲ್ಲ ಉದಾಹರಣೆಗೆ ಹೇಳುವುದಾದರೆ ಪಶ್ಚಿಮ ಜರ್ಮನಿಯಲ್ಲಿ ಸರ್ಕಾರದವರು ಒಂದು ಯೋಜನೆ ಮಾಡಿದ್ದಾರೆ. ಅದೇನೆಂದರೆ 15 ವರ್ಷಗಳ ಕಾಲ 50 ರೂಪಾಯಿಗಳಿಗೆ ಮೇಲ್ಪಟ್ಟು ಕಂದಾಯ ಕೊಡುತ್ತಿರುವ ಭೂಮಾಲಿಕರಿಗೆ ವ್ಯವಸಾಯ ಅಭಿವೃದ್ಧಿಗಾಗಿ ಸಾಲ ಕೊಡುತ್ತಿದ್ದಾರೆ.

Sri C. J. MUCKANNAPPA.—Sir, the Governor's Address is silent on that point. How can the Member refer to a point which is not mentioned in the Address ?

Mr. SPEAKER.—The Members need not confine to the points raised by the Governor. They can go far beyond. There is a great scope for the discussion.

Sri J. B. MALLARADHYA.—That privilege is open only to those who move the amendment and not to the Member who moves the Motion of Thanks. The Motion is only to Thank the Governor for what he has said in the Address.

Mr. SPEAKER.—This is a new thing that I hear. The scope of the discussion is not limited to the Motion of Thanks, it may also extend to the amendments there to. In fact, the discussion is so wide that it covers all this area and if anybody wants to make any other suggestion, it is open to him. It is a sort of a general discussion.

Sri J. B. MALLARADHYA.—I obey the Chair. But, I think that privilege is not open to the gentleman who moves the Motion of Thanks. I want you kindly to consider this point.

Mr. SPEAKER.—He is not criticising the Government. They are certain suggestions which he thinks are proper as can be made on this occasion. Anybody can make such suggestions.

Sri M. C. NARASIMHAN.—He can pass on that suggesstion to Srimathi Ratnamma Madhava Rao, who seconds the Motion.

Mr. SPEAKER.—When he has got privilege why should he pass it on to others ?

Sri T. SUBRAMANYA.—I wish the Members themselves accept their own suggestions !

Sri M. RAMAPPA (Harihar).—Sir, rise to a point of order. I refer to Rule 19 on page 6. It reads.—

"On such day or days or part of any day, the Assembly shall be at liberty to discuss the matters referred to in such Address on a Motion of Thanks moved by a member and seconded by another member."

It is very clear. The scope of discussion, especially, by the Mover and Seconder is limitted. They cannot make reference to matters other then those contained in the Address. It is only the privilege of those who move the amendments.

Mr. SPEAKER.—I am very sorry, I cannot accept the explanation. I have already said that every member has the right to make his own remarks on the Governor's Address. How he makes is a different matter ; it may come by way an amendment from one side and it may come as a matter of suggestion from the other side. I do not think that anybody's right of discussion at this stage is curtailed. If 'X' has that right, 'Y' has also that right.

ಶ್ರೀ ಎ. ವಿ. ನರಸಿಂಹರೆಡ್ಡಿ.—ಪಾಶ್ಚಿಮ ಜರ್ಮನಿಯಲ್ಲಿ ಸಂಸ್ಥಾನದ ಕೇಂದ್ರ ಅಪೆಕ್ಸ್ ಬ್ಯಾಂಕಿನವರು ರೈತರಿಗೆ ಸಾಲ ಕೊಡುವುದಕ್ಕೆ ವರ್ಷೇ ವರ್ಷೇ ಕೇಂದ್ರಸರ್ಕಾರದ ಕಡೆಗೆ ದೃಷ್ಟಿ ಇಟ್ಟು ನೋಡುತ್ತಿಲ್ಲ. ಕೇವಲ ಅಲ್ಲಿ ಅವರು 15 ವರ್ಷಗಳ ಅವಧಿಯನ್ನು ಗೊತ್ತುಮಾಡಿದ್ದಾರೆ ಅಲ್ಲಿ ಅಷ್ಟು ವರ್ಷಗಳತನಕ 50 ರೂಪಾಯಿಗಳ ಮೇಲ್ಪಟ್ಟು ಯಾರು ಕಂದಾಯ ಕೊಡುತ್ತಾರೋ ಅವರು ಸ್ವಲ್ಪ ಅನುಕೂಲಸ್ಥರಾದ ರೈತರು ಎಂಬುದಾಗಿ ಭಾವಿಸಿ ಅವರ ಮೇಲೆ ಸ್ವಲ್ಪ ನೇರವಾದ ಕಂದಾಯ ಬೇರೆ ಹಾಕುತ್ತಾರೆ. ಆ ಅವಧಿಯಲ್ಲಿ ತೆರಿಗೆಗಳ ಮೂಲಕ ಬರುವ ಪೂರ್ತಿ ಹಣವನ್ನು ಕೇಂದ್ರ ಸಹಕಾರ ಸಂಸ್ಥೆಗೆ ಕೊಡುತ್ತಾರೆ. ಅದರ ಜೊತೆಗೆ ಬಂಡವಾಳದ ಮೇಲೆ ಶೇ. 2ರಂತೆ ಬಡ್ಡಿ ಹಾಕುವುದನ್ನು ಸಹ ತೆಗೆದುಕೊಂಡು ರೈತರಿಗೆ ಆ ಒಟ್ಟು ಬಂಡವಾಳದಿಂದ ನೆರವು ನೀಡುವುದಕ್ಕೆ ಬರುತ್ತಾರೆಂದು ನಾನು ಹೇಳುತ್ತೇನೆ.

ಇನ್ನು ಹೆಚ್ಚಿಗೆ ಸಮಯವನ್ನು ತೆಗೆದುಕೊಳ್ಳದೆ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ. ಮುಂದಿನ ಯೋಜನೆಯಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸಲು ಸಿದ್ಧತೆಗಳು ಇವೆ. ಈ ಯೋಜನೆಯ ಅವಧಿಯಲ್ಲಿ ಕೈಗೊಳ್ಳುವ ಕಾರ್ಯಗಳ ವಿವರಗಳೂ ಇವೆ. ಇವನ್ನು ಪರಿಶೀಲಿಸಿ, ಅಂತರಂಗವಾಗಿ, ಬಹಿರಂಗವಾಗಿ, ಒಮ್ಮನಿಸ್ಸಿನಿಂದ ಮುಂದುವರೆದು ರಚನಾತ್ಮಕ ಕಾರ್ಯಗಳಲ್ಲಿ ಮುನ್ನೆಜ್ಜೆ ಇಡಲು ಸಿದ್ಧರಾಗೋಣ. ಸಮಾಜವಾದ ಸಮಾಜ ರಚನೆಗಾಗಿ ಪರಿಶ್ರಮಿಸುವುದಕ್ಕೆ ಸಂಸ್ಥಾನ ಮಳೆ ನಮ್ಮನಮ್ಮ ಕ್ಷೇತ್ರಗಳಲ್ಲಿ ಉತ್ತಮ ಅವಕಾಶಗಳು ಇದ್ದೇ ಇವೆ. ಅಲ್ಲಿ ನಿರ್ವಂಚನೆಯಿಂದ ಕೆಲಸ ಮಾಡಿ, ನಮ್ಮ ಜನರ ಸುಖ ಸಾಧನೆಗೆ ದುಡಿಯೋಣ, ಸಮತಾವಾದ ಸಮಾಜವಾದ ರಚನೆಗಾಗಿ ಶ್ರಮಿಸೋಣ. ಸುಖೀರಾಜ್ಯದ ಕಡೆಗೆ ನಮ್ಮ ರಾಜ್ಯವನ್ನು ತೆಗೆದುಕೊಂಡು ಹೋಗೋಣವೆಂದು ರಾಜ್ಯಪಾಲರು ಮಾಡಿದ ಉತ್ತಮ ಭಾಷಣಕ್ಕಾಗಿ ಅವರಿಗೆ ವಂದನೆಯನ್ನು ಸಲ್ಲಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ. 'ಜೈಹಿಂದ್'.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—''ಜೈಹಿಂದ್'' ಎಂದು ಇಲ್ಲಿ ಹೇಳಬಹುದೇ ? ಅಧ್ಯಕ್ಷರು ಅಭಿಪ್ರಾಯವೇನು ?

ಅಧ್ಯಕ್ಷರು.—ನಮ್ಮ ಮುಕ್ಕಣ್ಣಪ್ಪನವರೂ ಎಷ್ಟುಸಾರಿ ''ರಾಮ ರಾಮ'' ಎಂದು ಹೇಳಿದ್ದಾರೆ, ಹಾಗೆಯೇ ನರಸಿಂಹರೆಡ್ಡಿಯವರೂ 'ಜೈಹಿಂದ್' ಎಂದು force of habit ನಿಂದ ಹೇಳಿದ್ದಾರೆ.

ಶ್ರೀಮತಿ ರತ್ನಮ್ಮ ಮಾಧವರಾವ್ (ಶಿವಮೊಗ್ಗ).—ಮಾನ್ಯ ಸಭಾಪತಿಗಳೇ ಸಭೆಯ ಮುಂದಿರುವ ಮಾನ್ಯರಾಜ್ಯಪಾಲರು ಮಾಡಿದ ಭಾಷಣಕ್ಕಾಗಿ ವಂದನೆಗಳನ್ನು ಅರ್ಪಿಸುವ ನಿರ್ಣಯವನ್ನು ಅನುಮೋದಿಸುತ್ತಾ ಅವರು ತಮ್ಮ ಭಾಷಣದಲ್ಲಿ ಮೈಸೂರು ರಾಜಕೀಯ, ಸಾಮಾಜಿಕ, ಹಾಗೂ ಆರ್ಥಿಕ ಕ್ಷೇತ್ರದಲ್ಲಿ ಸಾಧಿಸಿರುವ ಪ್ರಗತಿಯ ಒಂದು ಸುಂದರವಾದ ಚಿತ್ರವನ್ನು ನಮ್ಮ ಮುಂದೆ ಇಟ್ಟಿರುತ್ತಾರೆ.

ಮಾನ್ಯ ರಾಜ್ಯಪಾಲರು ಹೇಳಿರುವಂತೆ, ಮಹಾತ್ಮ ಗಾಂಧೀಜಿಯವರು ಆದರ್ಶವಾದ ಸುಖೀರಾಜ್ಯ ಸ್ಥಾಪನೆಯ ದಿಕ್ಕಿನಲ್ಲಿ ಮೈಸೂರು ದಿಟ್ಟತನದಿಂದ ಹೆಜ್ಜೆಇಡುತ್ತಿದೆ ಎಂದು ಧೈರ್ಯವಾಗಿ ಹೇಳಬಹುದು.

ದೇಶದಲ್ಲಿ ತಲೆದೋರಿದ್ದ ಬಡತನ, ರೋಗರುಜಿನಗಳು, ಅವಿದ್ಯೆ, ಇವೆಲ್ಲಾ ಬಹುಮಟ್ಟಿಗೆ ಮಾಯವಾಗಿವೆ.

ಎರಡನೆಯ ಯೋಜನೆಯ ಅಂತ್ಯದಕಾಲದಲ್ಲಿ ವಿದ್ಯಾಭ್ಯಾಸ, ಆರೋಗ್ಯ ಹಾಗೂ ದುಡಿಮೆಯ ಕ್ಷೇತ್ರದಲ್ಲಿ ಅಸಾಧಾರಣ ಪ್ರಗತಿಯನ್ನು ಸಾಧಿಸಿರುತ್ತೇವೆಂದು ನಿಸ್ಸಂದೇಹವಾಗಿ ನಾನು ಹೇಳುತ್ತೇನೆ.

ಎರಡನೆಯ ಪಂಚವಾರ್ಷಿಕ ಯೋಜನೆಯನ್ನು ಯಶಸ್ವಿಯಾಗಿ ಜಾರಿಗೆ ತಂದು, ಮೂರನೆಯ ಯೋಜನೆಯನ್ನು ಆರಂಭಮಾಡುವಕಾಲ ತೀರಾ ಸಮೀಪಕ್ಕೆ ಬಂದಿದೆ. ಎರಡನೆಯ

ಯೋಜನೆಯು ಜಾರಿಗೆ ಬಂದಮೇಲೆ ಮೈಸೂರು ಸಾಧಿಸಿರುವ ಪ್ರಗತಿಯನ್ನು ನಾವು ವಿಮರ್ಶೆ ಮಾಡಬೇಕು.

ಹಳ್ಳಿಯಿಂದ ಡಿಲ್ಲಿಗೆ ಎಂಬ ನುಡಿಯಂತೆ ಅಧಿಕಾರ ವಿಕೇಂದ್ರಿಕರಿಸಿ ಹಳ್ಳಿಯಲ್ಲಿ ವಾಸಮಾಡುತ್ತಿರುವ ಬಹುಸಂಖ್ಯಾತ ಜನರು ತಮ್ಮ ಭವಿಷ್ಯವನ್ನು ರೂಪುಗೊಳಿಸಲು ಅವಕಾಶ ಕಲ್ಪಿಸಲಾಗಿದೆ.

ಪಂಚಾಯಿತ ರಾಜ್ಯಸ್ಥಾಪನೆಯಾಗಿ ತಮ್ಮಿಂದ ಚುನಾಯಿತರಾದ ಪ್ರತಿನಿದಿಗಳು ಗ್ರಾಮಾಂತರ ಪ್ರದೇಶಗಳಲ್ಲಿ ಆಗಬೇಕಾಗಿರುವ ಕೆಲಸಕಾರ್ಯಗಳಿಗಾಗಿ ಸರ್ಕಾರದದಾರಿಯನ್ನು ಕಾಯದೆ ತಮ್ಮ ಇಚ್ಛಾನುಸಾರ ನಡೆದುಕೊಂಡು ಹೋಗಲು ಗ್ರಾಮಾಂತರ ಜನರಿಗೆ ಸದವಕಾಶ ಕೊಡಲಾಗಿದೆ. ಮೈಸೂರು ದೇಶದಲ್ಲಿ ಪಂಚಾಯಿತಿಗಳಿಗೂ ತಾಲ್ಲೋಕು ಬೋರ್ಡುಗಳಿಗೂ ಚುನಾವಣೆಗಳನ್ನು ಜಯಪ್ರದವಾಗಿ ನಡೆಸಿ ನಮ್ಮ ಸರ್ಕಾರ ಅಧಿಕಾರವನ್ನು ಗ್ರಾಮಾಂತರ ಪ್ರಜೆಗಳಿಗೆ ವರ್ಗಾಯಿಸಿರುವುದು ಪ್ರಶಂಸನೀಯವಾದುದು. ಯಾವ ಯೋಜನೆಯೇ ಆಗಲಿ ಅದನ್ನು ಜಾರಿಗೆ ತರುವ ತರುಣದಲ್ಲಿ ಅನೇಕ ಎಡರು ತೊಡರುಗಳು ಕಾಣಿಸಿಕೊಳ್ಳುತ್ತವೆ? ಅಡ್ಡಿಆತಂಕಗಳೂ ಬರುತ್ತವೆ. ಯೋಜನೆ ವಿಫಲವಾಗುವುದೇನೋ ಎಂಬ ಶಂಕೆ ಬರುತ್ತದೆ. ಆದರೆ ಇವೆಲ್ಲವೂ ಕ್ಷಣಿಕ ಪಂಚಾಯಿತಿ ರಾಜ್ಯಸ್ಥಾಪನೆಯ ಪ್ರಾರಂಭದಲ್ಲಿ ತಲೆದೋರಬಹುದಾದ ಅಡ್ಡಿಆತಂಕಗಳಿಗೆ ಗಮನಕೊಡದೆ ಪ್ರಾಚೀನಕಾಲದಲ್ಲಿ ಯಶಸ್ವಿಯಾಗಿ ಕೆಲಸಮಾಡುತ್ತಿದ್ದ ಪಂಚಾಯಿತಿ ರಾಜ್ಯಸ್ವಾತಂತ್ರ್ಯ ಉದಯವಾದಮೇಲೆ ಜಯಪ್ರದವಾಗಿ ನಡೆದೇ ನಡೆಯುತ್ತದೆ ಎಂಬ ಧೃಡಸಂಕಲ್ಪದಿಂದ ಮುಂದೆ ಹೆಜ್ಜೆಇಡೋಣ ದೇಶದ ಬಹುಸಂಖ್ಯಾತರಾದ ಜನಗಳ ಏಳಿಗೆಗಾಗಿ ನಾವು ಸಾದಿಸಿರುವ ಪ್ರಗತಿಯಕಡೆ ದೃಷ್ಟಿ ಹಾಯಿಸೋಣ. '' ಉಳುವವನೇಒಡೆಯ '' ಎಂಬ ಕೂಗು ದೇಶದಲ್ಲಿ ಕೇಳಿಬರುತ್ತಿದೆ. ಇದನ್ನು ಸಾದಿಸಲು ಭೂಸುಧಾರಣೆ ಕಾನೂನು ಜಾರಿಗೆ ತರಬೇಕೆಂಬ ಹಿರಿದಾಸೆ ನಮ್ಮೆಲ್ಲರಲ್ಲಿಯೂ ಮೂಡಿತ್ತು. ಭೂಸುಧಾರಣೆ ಕಾನೂನು ಜಾಯಿಂಟ್ ಸೆಲೆಕ್ಟ್ ಕಮಿಟಿಯಿಂದ ಪರಿಶೀಲಿಸಲ್ಪಟ್ಟು ಸಮಿತಿಯ ವರದಿಯು ನಮ್ಮ ಮುಂದೆ ಇನ್ನು ಕೆಲವು ಸಮಯದಲ್ಲಿಯೇಬರಲಿದೆ. ಇದಲ್ಲದೆ ಗ್ರಾಮಾಂತರ ಪ್ರದೇದಲ್ಲಿ ಭೂಮಿ ಇಲ್ಲದೆ ಲಕ್ಷಾಂತರ ಜನ ಪರರ ಜಮೀನಿನ ಆಶ್ರಯದಿಂದ ತಮ್ಮ ಜೀವನವನ್ನು ಸಾದಿಸಬೇಕಾಗಿತ್ತು. ಈಸಮಸ್ಯೆಯನ್ನು ಬಗೆಹರಿಸುವ ಮಾರ್ಗದಲ್ಲಿ ನಮ್ಮ ಸರ್ಕಾರ ಮೆಚ್ಚುಗೆಯ ಪ್ರಗತಿಯನ್ನು ಸಾದಿಸಿರುತ್ತದೆ, ಎಂದು ನಾನು ಹೆಮ್ಮೆಯಿಂದ ಹೇಳ ಬಯಸುತ್ತೇನೆ. ಭೂರಹಿತರಿಗೆ, ವಿಶೇಷತಃ ಅನುಸೂಚಿತ ಜನಾಂಗದವರಿಗೆ ಒಟ್ಟು 40 ಸಾವಿರ ಎಕರೆಭೂಮಿಯನ್ನು ಬಡವರಿಗಾಗಿ ಸರ್ಕಾರದವರು ಹಂಚಿರುತ್ತಾರೆ. ಈ ಸುತ್ತ್ಯಕಾರ್ಯದಿಂದ ಸುಮಾರು ಒಂದು ಲಕ್ಷ ಹಳ್ಳಿಗಳಲ್ಲಿ ವಾಸಮಾಡುತ್ತಿರುವ ಸಂಸಾರ ಬಡತನದ ಬೇಗೆಯಿಂದ ಪಾರಾಗಲು ಅವಕಾಶ ಕಲ್ಪಿಸಿ ಕೊಟ್ಟಂತಾಗಿದೆ. ಆಹಾರ ಕ್ಷೇತ್ರದಲ್ಲಿ ಸ್ವಯಂಪೂರ್ಣತೆ ಪಡೆಯುವಕಾಲ ಸನ್ನಿಹಿತವಾಗಿದೆ ಎಂದರೆ ಅತಿಶಯೋಕ್ತಿಯಲ್ಲ ಭೂಮಿಇಲ್ಲದವರಿಗೆ ಜಮೀನು ಕೊಡುವುದು ರೈತಾಪಿಜನಗಳಿಗೆ ಸಕಾಲದಲ್ಲಿ ಸಾಲ ಒದಗಿಸುವುದು, ಆಧುನಿಕರೀತಿಯಲ್ಲಿ ವ್ಯವಸಾಯ ಮಾಡುವರೀತಿಯನ್ನು ಅನುಷ್ಠಾನಕ್ಕೆ ತರುವುದು ಸಣ್ಣ ಮತ್ತು ದೊಡ್ಡ ಕೆರೆಗಳು ದುರಸ್ತಿ ಕಾರ್ಯಗಳನ್ನು ಕೈಗೊಳ್ಳುವುದು, ಸಣ್ಣ ಮತ್ತು ದೊಡ್ಡ ನಿರಾವರಿ ಯೋಜನೆಗಳನ್ನು ಕಾರ್ಯಗತ ಮಾಡುವುದು ಇವೇ ಮುಂತಾದ ಕಾರ್ಯಗಳಿಂದ ನಮ್ಮ ದೇಶದಲ್ಲಿ ಆಹಾರ ಉತ್ಪಾದನೆ ಹೆಚ್ಚುತ್ತಿದೆ ಎಂಬ ಅಂಶವನ್ನು ನಾವು ಗಮನಿಸಬೇಕು.

ಆದರೆ ಪ್ರಜಾಸಂಖ್ಯೆಯ ಬೆಳವಣಿಗೆಗೆ ತಕ್ಕಹಾಗೆ ಆಹಾರ ಉತ್ಪಾದನೆ ಹೆಚ್ಚಾಗದಿರುವುದನ್ನು ನಾವು ಗಮನಿಸಬಹುದು. ಇದನ್ನು ಗಮನದಲ್ಲಿಟ್ಟುಕೊಂಡು ನಮ್ಮ ಸರ್ಕಾರದವರು ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ವ್ಯವಸಾಯದ ಅಭಿವೃದ್ಧಿಗಾಗಿ ವಿಶೇಷ ಗಮನ

ಕೊಟ್ಟಿರುವುದನ್ನು ನಾವು ಗಮನಿಸಬಹುದು. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸರ್ಕಾರದವರು ಹಾಕಿಕೊಂಡಿರುವ ಕಾರ್ಯಕ್ರಮ ಯಶಸ್ವಿಯಾದರೆ ನಾವು ಆಹಾರದ ವಿಷಯದಲ್ಲಿ ಸ್ವಯಂಪೂರ್ಣತೆಯನ್ನು ಪಡೆಯಬಹುದಲ್ಲದೆ ನಮ್ಮ ದೇಶದಿಂದ ಆಹಾರ ವಸ್ತುಗಳನ್ನು ಅದರಲ್ಲಿಯೂ ವಾಣಿಜ್ಯ ಫಸಲುಗಳನ್ನು ಹೊರದೇಶಕ್ಕೆರವಾನಿಸಿ ನಮ್ಮ ದೇಶಕ್ಕೆ ಅತ್ಯಗತ್ಯವಾಗಿ ಬೇಕಾಗಿರುವ ಡಾಲರುಗಳನ್ನು ಸಂಪಾದಿಸಬಹುದು.

ಕೈಗಾರಿಕಾ ಕ್ಷೇತ್ರದಲ್ಲಿ ಸಾಧಿಸಿರುವ ಪ್ರಗತಿಯ ಕಡೆಗೆ ನಮ್ಮದೃಷ್ಟಿ ಹಾಯಿಸಿದರೆ ನಮ್ಮ ಸರ್ಕಾರ ಪರಿಸ್ಥಿತಿಗೆ ಅನುಗುಣವಾಗಿ ಯಶಸ್ಸುಗಳಿಸಿದೆ ಎಂಬ ಅಂಶ ವೇದ್ಯವಾಗುತ್ತದೆ. ಕೈಗಾರಿಕಾ ಕ್ಷೇತ್ರ ವಿಸ್ತೀರ್ಣಕ್ಕೆ ಅತ್ಯಗತ್ಯವಾಗಿ ಬೇಕಾಗಿರುವ ವಿದ್ಯುಛಕ್ತಿಯ ಅಭಾವದಿಂದ ನಾವು ನಿರೀಕ್ಷಿಸಿದಷ್ಟು ಕಾರ್ಯಪೂರ್ಣವಾಗಿಲ್ಲ, ಶರಾವತಿ ಯೋಜನೆ ಪೂರ್ಣವಾಗುವಕಾಲ ಸನ್ನಿಹಿತವಾಗಿದೆ. ಶರಾವತಿ ಯೋಜನೆಯೊಂದಿಗೆ ಇತರೆ ವಿದ್ಯುಛಕ್ತಿ ಉತ್ಪಾದನೆಗಾಗಿ ನಮ್ಮ ಸರ್ಕಾರ ಕೈಗೊಂಡಿರುವ ಯೋಜನೆಗಳು ಪೂರೈಸಿದಮೇಲೆ, ಭಾರಿಕೈಗಾರಿಕೆಗಳನ್ನು ಸ್ಥಾಪಿಸಲು ಬೇಕಾಗಿರುವ ವಿದ್ಯುಛಕ್ತಿ ದೊರಕುತ್ತದೆ. ಆದಕಾರಣ ನಮ್ಮ ಸರ್ಕಾರದವರು ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಸರ್ಕಾರಿ ಹಾಗೂ ಖಾಸಗಿಕ್ಷೇತ್ರಗಳಲ್ಲಿ ಅನೇಕ ಕೈಗಾರಿಕೆಗಳ ಸ್ಥಾಪನೆಗಾಗಿ ಭಾರಿ ಪ್ರಮಾಣದ ಯೋಜನೆಯನ್ನು ಹಾಕಿಕೊಂಡಿದ್ದಾರೆ. ಇದರಿಂದ ಅದಷ್ಟು ಮಟ್ಟಿಗೆ ನಿರುದ್ಯೋಗ ಸಮಸ್ಯೆ ಪರಿಹಾರವಾಗುವುದಲ್ಲದೆ ದೇಶದ ಸಂಪತ್ತೂ ಸಹ ಹೆಚ್ಚುವುದು.

ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಸಹ ನಾವು ಪ್ರಗತಿಮಾರ್ಗದಲ್ಲಿ ಹೋಗುತ್ತಿರುವುದನ್ನು ಕಾಣಬಹುದು. ಸಂಸ್ಥಾನಮುಳೆ ಕಡ್ಡಾಯ ಶಿಕ್ಷಣ ಪದ್ಧತಿಯನ್ನು ಜಾರಿಗೆ ತರುವ ಯೋಜನೆಯನ್ನು ಅನುಷ್ಠಾನಕ್ಕೆ ತರಲು ಸರ್ಕಾರ ಕಾರ್ಯಕ್ರಮ ಕೈಗೊಂಡಿರುತ್ತದೆ. ಇದರಿಂದ ಅನಕ್ಷರತೆ ಆದಷ್ಟುಮಟ್ಟಿಗೆ ಮಾಯವಾಗಬಹುದು.

ಮಾನ್ಯ ರಾಜ್ಯಪಾಲರು ಇತರೆ ಕ್ಷೇತ್ರಗಳಲ್ಲಿ ಸರ್ಕಾರ ಸಾಧಿಸಿರುವ ಮಹತ್ಕಾರ್ಯಗಳನ್ನು ತಿಳಿಸಿರುತ್ತಾರೆ. ಮೂರನೇ ಯೋಜನೆಯಲ್ಲಿ ಸರ್ಕಾರವು ವಿವಿಧ ಕ್ಷೇತ್ರಗಳಲ್ಲಿ ಸಾಧಿಸಬಹುದಾದ ಕಾರ್ಯಗಳನ್ನು ಸ್ಥೂಲವಾಗಿ ತೋರಿಸಿತ್ತಾರೆ. ಸುಖೀ ರಾಜ್ಯಸ್ಥಾಪನೆಹಾದಿಯಲ್ಲಿ ಯಶಸ್ವಿಗಳಿಸುವ ಭರವಸೆಯನ್ನು ನೀಡಿರುತ್ತಾರೆ. ವಿಚಾರಪೂರಿತವಾದ ಭಾಷಣವನ್ನು ಮಾಡಿದುದಕ್ಕಾಗಿ ಮಾನ್ಯ ರಾಜ್ಯಪಾಲರಿಗೆ ವಂದನೆಗಳನ್ನರ್ಪಿಸಲು ಬಹಳ ಸಂತೋಷಪಡುತ್ತೇನೆ. ಇನ್ನು ಒಂದೇ ಒಂದು ವಿಷಯವನ್ನು ಹೇಳಬೇಕಾಗಿದೆ. ನಮ್ಮ ಮಹಿಳೆಯರ ಅಭಿವೃದ್ಧಿಗಾಗಿ ರಾಜ್ಯಪಾಲರ ಭಾಷಣದಲ್ಲಿ ಏನು ಪ್ರಸ್ತಾಪ ಮಾಡದಿದ್ದರೂ ಕೂಡ, ಸರ್ಕಾರದವರು ಬಡ್ಜೆಟ್ಟಿನಲ್ಲಿ ಮಹಿಳೆಯರಿಗಾಗಿ ಹೆಚ್ಚು ಹಣ ಒದಗಿಸಿ ಅವರ ಮುಂದಿನ ಪ್ರಗತಿಗೆ ಅವಕಾಶ ಕಲ್ಪಿಸಿ ಕೊಡುತ್ತಾರೆಂದು ನಂಬಿದ್ದೇನೆ.

ಮಾನ್ಯ ರಾಜ್ಯಪಾಲರು ವಿದೇಶಪ್ರಯಾಣ ಕೈಗೊಳ್ಳಲಿದ್ದಾರೆ ಅವರು ಪ್ರಯಾಣ ಸುಖಮಯವಾಗಲೆಂದು ಆಶಿಸಿ ಸಭೆಯಮುಂದಿರುವ ವಂದನಾರ್ಪಣ ನಿರ್ಣಯವನ್ನು ನಾನು ಅನುಮೋದಿಸುತ್ತೇನೆ. ಮತ್ತು ಮಾನ್ಯ ಸದಸ್ಯರುಗಳೂ ಕೂಡ ತಮ್ಮ ಹೃತ್ಪೂರ್ವಕ ಬೆಂಬಲ ನೀಡಬೇಕೆಂದು ವಿನಂತಿಮಾಡಿ, ಇಷ್ಟು ಮಾತನಾಡಲು ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದನೆ ಅರ್ಪಿಸುತ್ತೇನೆ.

4-30 P.M.

†ಶ್ರೀ ಬಿ. ಕೆ. ಪುಟ್ಟರಾಮಯ್ಯ (ಚನ್ನಪಟ್ಟಣ).—ಸ್ವಾಮಿ ರಾಜ್ಯಪಾಲರ ಭಾಷಣವು ಈ ಸಾರ್ತಿ ಬಹುನಿರಾಶಾದಾಯಕವಾಗಿದೆ. ರಾಜ್ಯಪಾಲರ ಭಾಷಣಗಳು ಯಾವಾಗ್ಲೂ ಇಷ್ಟೊಂದು ನಿರಾಶಾದಾಯಕವಾಗಿರಲಿಲ್ಲ. ಆದರೆ ಈ ವರ್ಷ ರಾಜ್ಯಪಾಲರ ಭಾಷಣ ಬಹಳ ರಾಶಾದಾಯಕ ಹಾಗೂ ನೀರಸವಾಗಿರುತ್ತದೆ. ಇದರಲ್ಲಿ ಯಾವ ಅಂಥ ಪ್ರಾಮುಖ್ಯವಾದ

ಅಂಶಗಳೂ ಅಡಕವಾಗಿಲ್ಲ. ಆದರೆ ಈ ಮಂತ್ರಿಮಂಡಲದ ನೇಮಕದ ಬಗ್ಗೆ ರಾಜ್ಯಪಾಲರಿಗೆ ಹೆಚ್ಚಿನ ಜವಾಬ್ದಾರಿಯಿರುತ್ತೆ. ಹಾಗಿರುವಾಗ ನಮ್ಮ ರಾಜ್ಯಪಾಲರು ಈಗಿರತಕ್ಕ ಮಂತ್ರಿ ಮಂಡಲವನ್ನು ಈಗಿರತಕ್ಕ ಶಾಸನಸಭಾ ಸದಸ್ಯರ ಸದಸ್ಯತ್ವದ ಅವಧಿ ಇನ್ನೇನು ಕೇವಲ 10–11 ತಿಂಗಳುಗಳಲ್ಲಿ ಮುಗಿದು ಮತ್ತೆ ಹೊಸಚುನಾವಣೆಗಳು ನಡೆಯು ಬೇಕಾದಂಥ ಕಾಲ ಸನ್ನಿಹಿತವಾಗುತ್ತಿರುವಾಗ, 1957 ರಿಂದ 1961 ರವರೆಗೂ ಕಾಣಬಾರದೆ ಇದ್ದಂಥ ಅಘಾದ ಪ್ರಮೇಯಗಳೇನು ಈಗ ಈ ರೀತಿ ಮಂತ್ರಿಮಂಡಲವನ್ನು ಹೆಚ್ಚು ಮಾಡಲು ಕಂಡು ಬಂದಿರುತ್ತೆವೆಂಬ ವಿಚಾರದಲ್ಲಿ ಈ ಭಾಷಣದಲ್ಲಿ ರಾಜ್ಯಪಾಲರು ಒಂದು ಸೊಲ್ಲನ್ನೂ ಹೇಳಿಲ್ಲ. ಈ ಅಂತ್ಯಅವಧಿಯ ವೇಳೆಯಲ್ಲಿ ನಾಲ್ಕು ಜನ ಮಂತ್ರಿಗಳ ನೇಮಕದ ಬಗ್ಗೆ ಏನು ಅಂಥ ಮಹತ್ತಾದ ಕಾರಣಗಳಿದ್ದವೆಂಬುದನ್ನು ಈ ಭಾಷಣದಲ್ಲಿ ಅವರು ಪ್ರಸ್ತಾಪಮಾಡಿಲ್ಲ. ಇದು ಶೋಚನೀಯ ನಾಲ್ಕು ಜನ ಮಂತ್ರಿಗಳ ನೇಮಕದ ಬಗ್ಗೆ ಏನಂಥ ಗುರುತರವಾದ ಕಾರ್ಯಗಳಿದ್ದವು ಅಥವಾ ದೇಶದ ಯಾವ ಹಿತದೃಷ್ಟಿಯ ಸಾಧನೆಗಾಗಿ ಹೀಗೆ ಅನಿವಾರ್ಯವಾಗಿ ನಾಲ್ಕು ಜನರು ಮಂತ್ರಿಗಳನ್ನು ಹೆಚ್ಚಿಗೆ ನೇಮಿಸಬೇಕಾಗಿ ಬಂತು ಎಂಬ ವಿಚಾರದಲ್ಲಿ ರಾಜ್ಯಪಾಲರು ಈ ವಿಚಾರವನ್ನು ಸ್ವಲ್ಪ ವಿಶದೀ ಕರಿಸಿ ಹೇಳಬೇಕಾಗಿದ್ದುದು ಅವರ ಪ್ರಾಮುಖ್ಯ ಕರ್ತವ ಗಳಲ್ಲಿ ಇದೂ ಕೂಡ ಒಂದಾಗಿತ್ತು. ಈ ವಿಚಾರವಿಲ್ಲದಿರುವುದು ಶೋಚನೀಯ, ಇಂಡಿಯಾ ದೇಶದಲ್ಲಿ ಪ್ರಜಾಪ್ರಭುತ್ವಾಡಳಿತ ಬಂದನಂತರ ಇಂಡಿಯಾದೇಶದಲ್ಲಿರತಕ್ಕ ರಾಜ್ಯಗಳೂ-- ರಾಜ್ಯಸರ್ಕಾರಗಳೂ ರಾಜ್ಯಪಾಲರಿಗೆ ಮನ್ನಣೆ ನೀಡದೆ ಇರುವುದು, ಆದರೆ ನಾನೀಗ ಈ ವಿಚಾರವನ್ನು ಅಷ್ಟಾಗಿ ಪ್ರಸ್ತಾಪಿಸ ಬೇಕಾಗಿರಲಿಲ್ಲ, ಆದರೆ ಈ ರಾಜ್ಯಗಳ ಆಡಳಿತವನ್ನು ನಡೆಸುತ್ತಿರುವ ಕಾಂಗ್ರೆಸ್ ಪಕ್ಷ ರಾಜ್ಯಾಡಳಿತ ವಿಚಾರದಲ್ಲಿ ರಾಜ್ಯಪಾಲರಿಗೆ ಸಲ್ಲಬೇಕಾದ ಮನ್ನಣೆಯನ್ನು ಕೂಡ ಸಲ್ಲಿಸದೆ ಇರುವಷ್ಟು ದೂರ ಹೋಗಿದೆ. ಅದರಿಂದ—

ಅಧ್ಯಕ್ಷರು.—ಮಾನ್ಯಸದಸ್ಯರು ಇಡೀ ಇಂಡಿಯಾದೇಶದ ವಿಚಾರಕ್ಕೆ ಕೈಹಾಕದೆ ನಮ್ಮ ರಾಜ್ಯದ ವಿಚಾರವೆಷ್ಟಿದೆಯೋ ಅಷ್ಟು ಮಾತ್ರ ಮಾತನಾಡುವುದು ಒಳ್ಳೆಯದೆಂದು ಸೂಚಿಸುತ್ತೇನೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಆಗಲಿ ಸ್ವಾಮಿ, ಇದೇರಾಜ್ಯದ ವಿಚಾರವೆಂತ ಹೇಳೋಣ, ಇಂಡಿಯಾ ದೇಶದಲ್ಲಿರುವ...

ಅಧ್ಯಕ್ಷರು.—ಹಾಗೆಮತ್ತೇಕೆ ಹೇಳುತ್ತೀರಿ? ನಮ್ಮರಾಜ್ಯದಲ್ಲಿ ಎಂದು ಹೇಳಿ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಸ್ವಾಮಿ ನಾವು ಸಾಮಾನ್ಯವಾಗಿ ಮಾತನಾಡುವಾಗ ಅನೇಕ ಸಂದರ್ಭಗಳಲ್ಲಿ ಬ್ರಿಟನ್ ಡೆಮಾಕ್ರಸಿ ಆಡಳಿತಕ್ಕೆ ಒಂದು ಮಾದರಿ ದೇಶವೆಂದು ಹೇಳುತ್ತೇನೆ, ಆದರೆ ನಾವುಹಾಗೆ ಹೇಳುವಾಗ ಅವರೇನೂ ಇಲ್ಲಿ ಬಂದು ಕುಳಿತಿರುವುದಿಲ್ಲ. ಆದರೆ ಈ ದಿವಸ ನಮ್ಮದೇಶದಲ್ಲಿರುವ ಈ ಡೆಮಾಕ್ರಸಿ ಆಡಳಿತವೇನಿದೆ ಇದು ನಮ್ಮ ದೇಶದಲ್ಲಿ ಇರಬೇಕೇ ಬೇಡವೇ, ಇದರಿಂದ ದೇಶದ ಜನರಿಗೇನಾದರೂ ಒಳ್ಳೆಯದಾಗುತ್ತದೆಯೇ ಎಂಬ ವಿಚಾರದಲ್ಲಿ ಯಾವ ಜನಗಳಿಗೆ ಈ ಡೆಮಾಕ್ರಸಿ ಆಡಳಿತದಲ್ಲಿ ಒಂದು ಪೂರ್ಣವಿಶ್ವಾಸವಿರುತ್ತದೆಯೋ ಅಂಥ ಜನರೇ ಈ ದಿವಸ ನಮ್ಮದೇಶದಲ್ಲಿ ಈ ಡೆಮಾಕ್ರಸಿ ಎಂಬುದು ಇಲ್ಲದಿದ್ದರೇನೇ ದೇಶ ನೆಮ್ಮದಿಯಿಂದ ಇರುತ್ತಿತ್ತೇನೋ ಎಂಬ ಅಭಿಪ್ರಾಯದಕಡೆಗೆ ತಿರುಗಿದ್ದಾರೆ ಇದಕ್ಕೆ ಕಾರಣವೇನೆಂದರೆ–ಈಗ ನಮ್ಮ ಮೈಸೂರು ರಾಜ್ಯದ ವಿಚಾರವನ್ನೇ ತೆಗೆದುಕೊಳ್ಳುವುದಾದರೆ, ಕಳೆದ ಎರಡು ಮಹಾಚುನಾವಣೆಗಳ ನಂತರ 1947 ರಿಂದ ಈಚೆಗೆ ನಮ್ಮ ರಾಜ್ಯದಲ್ಲಿ ಅದೆಷ್ಟು ಮಂತ್ರಿ ಮಂಡಲಗಳಾದವು-ಅವುಗಳು ಎಷ್ಟು ಸಾರ್ತಿ ಬದಲಾವಣೆಗಳಾದವು, ಎಷ್ಟು ಸಾರ್ತಿ ಮಂತ್ರಿ ಮಂಡಳ ರೀಷಫಲ್ ಆಯಿತು ಎನ್ನುವುದನ್ನೆಲ್ಲಾ ಸ್ವಲ್ಪ ದೀರ್ಘವಾಗಿ ಆಲೋಚನೆ ಮಾಡಿ ನೋಡಿದರೆ ನಮ್ಮ ಮನಸ್ಸಿಗೇನು ಗೊತ್ತಾಗುತ್ತದೆಂದರೆ ಈ ಮಂತ್ರಿ ಮಂಡಳಗಳ ಬದಲಾವಣೆಯಲ್ಲಿ ಅಡಗಿರತಕ್ಕ ತತ್ತ್ವಧ್ಯೇಯ–ಧೋರಣೆಗಳೇನು–ಎಂಬುದಕ್ಕೆ ಇಂದಿನ ಬದಲಾ

(ಶ್ರೀ ಬಿ. ಕೆ. ಪುಟ್ಟರಾಮಯ್ಯ)

ವಣೆಯು ಒಂದು ಸಾಕ್ಷಿಯಾಗಿದೆ. ಮೊಟ್ಟಮೊದಲನೇಯದಾಗಿ ಶ್ರೀ ಕೆ. ಹನುಮಂತಯ್ಯನವರ ಮಂತ್ರಿ ಮಂಡಳವನ್ನು ಬದಲಾಯಿಸಲು ಅದರಲ್ಲಿದ್ದ ಮಂತ್ರಿಗಳೆಲ್ಲರ ಮೇಲೆ ನೂರಾರು ಅಪಾ ಗಳನ್ನು ಹೊರಿಸಲಾಯಿತು. ಹಾಗೆ ಅಪಾದನೆಗಳನ್ನು ಹೊರಿಸಿ ಅವರನ್ನು ತೆಗೆದಮೇಲೆ ಪುನಾ ದನೆ ಅದೇ ಮಂತ್ರಿ ಮಂಡಲದಲ್ಲಿದ್ದ ಎಲ್ಲ ಮಂತ್ರಿಗಳೂ ಬಹಳ ಸಂಪನ್ನರೆಂಬುದಾಗಿ ಶ್ರೀ ಹನು ಮಂತಯ್ಯನವರೊಬ್ಬರನ್ನುಳಿದು ಬಾಕಿ ಜನರೆಲ್ಲ ಅದರಲ್ಲಿ ಮತ್ತೆ ಮಂತ್ರಿಗಳಾದರು! ಇದಾದನಂತರ ಶ್ರೀ ನಿಜಲಿಂಗಪ್ಪನವರ ಮಂತ್ರಿಮಂಡಲ ಬಂತು. ಕೇವಲ ಕೆಲವೇ ದಿನ ಗಳಲ್ಲಿ ಈ ಮಂತ್ರಿಮಂಡಳದ ಮೇಲೆ ಅನೇಕ ದೂರುಗಳನ್ನು ಹೋರಿಸಿ, ಇವರ ಮಂತ್ರಿಮಂಡಳ ಬಹಳ ಮಂದಗಾಮಿ, ಮಂತ್ರಿಮಂಡಳದಿಂದ ದೇಶಕ್ಕೆ ಒಳ್ಳೆಯದಾಗಲು ಸಾಧ್ಯವಿಲ್ಲ ಎಂದು ಹೇಳಿ ಆ ಮಂತ್ರಿ ಮಂಡಳದ ಮೇಲೆ ಅನೇಕ ತಪ್ಪುಗಳನ್ನು ಹಾಕಿ ಅದನ್ನು ಉರುಳಿಸಲಾಯಿ ತು, ಆದರೆ ಆ ದಿವಸ ಆ ಮಂತ್ರಿಮಂಡಳವನ್ನು ಪದಚ್ಯುತಿ ಮಾಡ ಬೇಕೆಂದು ಮಂತ್ರಿ ಮಂಡ ಳವನ್ನು ರಚಿಸುವಾಗ ಆ ಹಿಂದಿನ ಮಂತ್ರಿಮಂಡಳದ ಮೇಲಿದ್ದ ಅಪರಾಧಗಳೇನೆಂಬುದನ್ನು ವಿಮರ್ಶೆಮಾಡಲಿಲ್ಲ, ತಪ್ಪಿತಸ್ಥರಿಗೆ ಶಿಕ್ಷೆಯನ್ನೂ ವಿಧಿಸಲಿಲ್ಲ. ಆದರೆ ಹಾಗೆ ಅಪರಾಧಗಳನ್ನೊ ರಿಸಿ ಪದಚ್ಯುತಿ ಮಾಡಿದ ಮಂತ್ರಿಡಳದಲ್ಲಿದ್ದ ಶ್ರೀ ಟಿ. ಮರಿಯಪ್ಪನವರೊಬ್ಬರನ್ನು ಮಾತ್ರ ಈ ಹೊಸ ಮಂತ್ರಿಮಂಡಳಕ್ಕೆ ಸೇರಿಸಿಕೊಂಡರು. ಅಂದ ಮೇಲೆ ಶ್ರೀ ನಿಜಲಿಂಗಪ್ಪನವರ ಕ್ಯಾಬಿನೆಟ್ ಸರಿಯಾಗೆ ಇತ್ತು ಎಂತ ತಿಳಿದುಕೊಳ್ಳೋಣವೇ ಅಥವಾ ಅದರಲ್ಲಿ ತಪ್ಪಿತ್ತು ಎಂತ ತಿಳಿದುಕೊಳ್ಳೋಣವೇ! ಇಷ್ಟೆಲ್ಲಾ ಆದಮೇಲೆ ಅದೇನೋ ಸುಮಾರು ಎರಡು ವರ್ಷಗಳ ಇಲ್ಲ ಯವರೆಗೂ ಒಂದು ಮಂತ್ರಿ ಮಂಡಳವಿತ್ತು. ಆದರೆ ಆ ಮಂತ್ರಿಮಂಡಳದ ಮೇಲೂ ಇನ್ನೇ ನು ಹೊಸ ಚುನಾವಣೆಗಳು ನಡೆಯಲು ಕೇವಲ 10–11 ತಿಂಗಳ ಅವದಿ ಇರುವಾಗ ಈ ಮಂತ್ರಿ ಮಂಡಳದ ಮೇಲೂ ಅಪಾದನೆಗಳ ಧಾಳಿ ಪ್ರಾರಂಭವಾಯಿತು. ಈ ಮಂತ್ರಿಮಂಡಳದ ಮೇಲೆ ಇಪ್ಪತ್ತೊಂಭತ್ತು ಆಪಾದನೆಗಳನ್ನು ಹೊರಿಸಲು ಪ್ರಾರಂಭವಾಯಿತು. ಅಪಾದನೆಗಳ ಪಟ್ಟಿ ಹಿಡಿದುಕೊಂಡು ಹೈಕಮ್ಯಾಂಡ್ ಬಳಿಗೆ ಡೆಲ್ಲಿಗೆ ಹೋದರು. ಈ ಯಾತ್ರೆಗೆ ಅಂದರೆ ಡೆಲ್ಲಿ ಯಾತ್ರೆಗೆ ನಮ್ಮ ಬಡ ಬೋರೇಗೌಡನ ರಾಜ್ಯ ಸರ್ಕಾರದ ಹಣಖರ್ಚುಬಿದ್ದಿದೆ. ಈ ಸಂದರ್ಭ ದಲ್ಲಿ ಡೆಲ್ಲಿಗೆ ಮುಖ್ಯಮಂತ್ರಿಗಳೂ ಯಾತ್ರೆ ಹೋಗಬೇಕಾಯಿತು. ಅಂದರೆ ಈ ಆಡಳಿತ ಪಕ್ಷದಲ್ಲಿ ಅಂದರೆ ಕಾಂಗ್ರೆಸ್ ಪಕ್ಷದಲ್ಲಿ ಇರತಕ್ಕಂತ ಒಳಜಗಳಗಳ ಅಂತರ್ಯವೇನೆಂಬುದನ್ನು ಗ್ರಹಿಸಿದರೆ ಅದೆಲ್ಲವೂ ಕೇವಲ ಆ ಅಧಿಕಾರದಾಹದ ಆಸೆಒಂದೇ ಎಂಬುದು ಎಲ್ಲರಿಗೂ ಎದ್ದುಕಾಣುತ್ತಿದೆ. ಆದರೆ ಈ ವಿಚಾರದಲ್ಲಿ ಬಹಳ ವಿಷಾಧ ಪಡಬೇಕಾದ ಒಂದು ಅಂಶವೇನೆಂದರೆ—ಹೊಟ್ಟೆ—ಬಟ್ಟೆ ಗಿಲ್ಲದ ಜನರಿಂದ ಉಡತಕ್ಕ ಸೀರೆಮೇಲೆ ಸುಂಕ ಹಾಕಿ, ಆ ದುಡ್ಡನ್ನು ವಸೂಲ್ಮಾಡಿಕೊಂಡು ಆ ಹಣವನ್ನು ಅಧಿಕಾರದ ಕಚ್ಚಾಟಗಳಿಗಾಗಿ ಡೆಲ್ಲಿ ಯಾತ್ರೆಗೆ ಉಪಯೋಗಿಸುತ್ತಿದ್ದಾರೆಂಬು ದು ಬಹಳ ವಿಷಾದಕರವಾದ ಸಂಗತಿ, ಆದರೆ ಈ ಹಿಂದೆ ಈಗಿರತಕ್ಕ ಮಂತ್ರಿಮಂಡಳದ ಮೇಲೆ 29 ಆಪಾದನೆಗಳನ್ನು ಹೊರಿಸಲು ಹೊರಟಿದ್ದಾಗ-ಈ ಮಂತ್ರಿ ಮಂಡಳಪೂರ್ತಿ ಹೋಗಲೇಬೇಕು, ರಾಜೀಸಂಧಾನಗಳಿಗೆ ನಾವು ಒಪ್ಪುವುದಿಲ್ಲ ಎಂಬುದಾಗಿ ಹೇಳುತ್ತಿದ್ದಾರೆಂತ ನಾವು ವರ್ತಮಾನ ಪತ್ರಿಗಳ ಮೂಲಕ ಈ ವಿಷಯಗಳನ್ನು ತಿಳಿಯುತ್ತಿದ್ದೆವು. ಆಗ ಈ ಮಂತ್ರಿಮಂಡಳದ ಮೇಲೆ ನಡೆಸುತ್ತಿದ್ದ ವಿಚಾರಣೆಯ ಕಾಲದಲ್ಲಿ ನಾವೆಲ್ಲರೂ ಏನೋ ಈಗಿರತಕ್ಕ ಮಂತ್ರಿಮಂಡಳದ ಮೇಲೆ-ಅಂದರೆ ಮುಖ್ಯಮಂತ್ರಿಗಳಲ್ಲಿ ಅನೇಕ ತಪ್ಪುಗಳಿರಬೇಕೆಂದು ಕಾಣುತ್ತಿದೆ, ದೇಶದ ಕ್ಷೇಮಕ್ಕಾಗಿ ಈ ರೀತಿ ಹೋರಾಟನಡೆಯುತ್ತಿದೆ, 29 ಆಪಾದನೆಗಳಲ್ಲಿ ಕನಿಷ್ಟ 9 ಆಪಾದನೆ ಗಳಾದರೂ ನಿಜವಿರಲೇಬೇಕು, ಈ ಮಂತ್ರಿಮಂಡಳದಲ್ಲಿರತಕ್ಕ ಮಂತ್ರಿಗಳಿಗೆಲ್ಲ ಏನಾದರೂ ಒಂದು ಶಿಕ್ಷೆ ಆಗಲೇಬಹುದು ಎಂತ ನಾವೆಲ್ಲರೂ ತಿಳಿದುಕೊಂಡಿದ್ದೆವು.

ಈಗ ಏನಾಗಿದೆ ಅಂದರೆ ಮೊನ್ನೆಯ ದಿವಸ ಮುಖ್ಯ ಮಂತ್ರಿಗಳು ಮತ್ತು ಆಡಳಿತ ವರ್ಗಕ್ಕೆ ಸಂಭಂಧಪಟ್ಟವರು ಅಸ್ಪತ್ರೆಯ ಒಂದು ರೂಮಿನಲ್ಲಿ ತೀರ್ಮಾನ ಮಾಡಿದ್ದಾರೆ.

ಇವರ ಮೇಲೆ 29 ಚಾರ್ಜಸ್ ಇದ್ದವು. ಕರಪ್ಷನ್ ನೆಪೋಟಿಜಂ ಇವೆಲ್ಲ ವಿಚಾರವಿದ್ದರೂ ಸಹ ಆಸ್ಪತ್ರೆಯಲ್ಲಿ ಈ ರೀತಿ ತೀರ್ಮಾನ ಮಾಡಿದರೆ ನಮ್ಮ ಜನ ಏನು ತಿಳಿದು ಕೊಂಡಾರು ? ನಾವು ಯಾವ ಅಂತಸ್ತಿಕ್ಕೆ ಇಳಿದಿದ್ದೇವೆ? ಜನತೆಯು ಬೆಂಬಲ ಇದೆಯೋ? ಇಲ್ಲವೇ? ಪ್ರಜಾ ಪ್ರಭುತ್ವದಲ್ಲಿ ಜನತೆಗೆ ಅಪನಂಬಿಕೆ ಉಂಟಾಗಿದೆ, ಮಂತ್ರಿ ಮಂಡಳದ ಮೇಲೆ ಅನ್ಯಾಯದ ಪರಾಪರೆಯನ್ನೇ ಹೊರಿಸಿ ಪದಚ್ಯತಗೊಳಿಸಿದರು. ಪದಚ್ಯುತ ಆದವರು ಈಗ ಮಂತ್ರಿ ಮಂಡಳದಲ್ಲಿ ಬಂದಿದ್ದಾರೆ. ಇದೆಂಥ ತೀರ್ಮಾನ? ನಿಮ್ಮ ಮನಸ್ಸಿಗೆ ಯಾವುದು ಸರಿ ಎಂದು ಕಂಡು ಬರುತ್ತದೆಯೋ ಅದು ಸರಿಯಾಗುತ್ತದೆ. ಕರಪ್ಷನ್ ಚಾರ್ಜ್ ಅಪಾದನೆ ಮಾಡಿದ ಮಂತ್ರಿಗಳು ಇಂದು ಅವರು ಹಾಗೆ ಅಲ್ಲ. ಎಂದು ಹೇಳುತ್ತಿದ್ದೀರಿ. ಇಂದು ಅವರು free from corruption, free from nepotisom ಆಗಿದ್ದಾರೆ.

ಅಧ್ಯಕ್ಷರು.—ಆಸ್ಪತ್ರೆಯಲ್ಲಿ ಭೇದಿಗೆ ಔಷಧ ದೊರೆಯುತ್ತದೆ. ಈಗ ಎಲ್ಲಾ ಸರಿ ಹೋಯಿತು.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಈಗ ಹೊಸದಾಗಿ ನಾಲ್ಕು ಜನ ಮಂತ್ರಿಗಳೆಂದು ಸೇರಿಸಿಕೊಂಡ ಮೇಲೆ 29 ಚಾರ್ಜಸ್‌ಗಳು ಒಂದು ನಿಮಿಷದಲ್ಲಿ ಹೇಗೆ ತೀರ್ಮಾನವಾಯಿತು? ಮಂತ್ರಿಮಂಡಳವು ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ಹೆಚ್ಚಾಗಿ ವಾದ ಮಾಡತಕ್ಕಂಥ ವರು ಇಂದು ಅವರೇ ಮಂತ್ರಿಗಳ ಪಕ್ಕದಲ್ಲಿ ಕುಳಿತು ಮಂತ್ರಿಗಳಾಗಿ ಸಭೆಗೆ ಉತ್ತರ ಕೊಡತಕ್ಕಂಥವರಾಗಿದ್ದಾರೆ ಈ ಮೊದಲು ಅಗಾಧ ಟೀಕೆ ಮಾಡುತ್ತಿದ್ದವರಿಂದಲೇ ಈಗ ನಾವು ಉತ್ತರ ಕೇಳಬೇಕಾದ ಪರಿಸ್ಥಿತಿ ಬಂದಿದೆ. ಜನತೆಯ ಹಿತ ದೃಷ್ಟಿಯಿಂದ ನಾಲ್ಕು ಜನ ಹೊಸಮಂತ್ರಿಗಳನ್ನು ತೆಗೆದು ಕೊಂಡು ಮಂತ್ರಿಮಂಡಳ ಬಧಾವಣೆ ಮಾಡಿಲ್ಲ ಅವರ ಸ್ವಂತ ಹಿತಕ್ಕಾಗಿ ಬಧಾವಣೆ ಮಾಡಲಾಗಿದೆ ಎಂಬ ತಿಳುವಳಿಕೆ ಕೊಡುತ್ತಾ ಇದ್ದೀರಿ. ಸ್ವಾಮಿ ಇವತ್ತಿನ ದಿವಸ ದೇಶದಲ್ಲಿ ಆಹಾರ ಅಭಾವವಿದೆ, ಬಡತನವಿದೆ, ನಿರುದ್ಯೋಗ ಹೆಚ್ಚುತ್ತಿದೆ ಕುಡಿಯುವುದಕ್ಕೆ ನೀರು ಇಲ್ಲ, ಚಿತ್ರದುರ್ಗ ಮೊದಲಾದ ಪ್ರದೇಶಗಳಲ್ಲಿ ಕ್ಷಾಮ ಪರಿಸ್ಥಿತಿ ಯಿದೆ. ಇವುಗಳ ಕಡೆಗೆ ಗಮನ ಕೊಡುವದಕ್ಕೆ ರಾಜ್ಯಸರಕಾರಕ್ಕೆ ಶಕ್ತಿ ಇಲ್ಲದಾಗ ನಾಲ್ಕು ಮಂತ್ರಿಗಳನ್ನು ನೇಮಕವಾಡಿಕೊಂಡಿದ್ದೀರಿ. ಮಂತ್ರಿಗಳಿಗೆ ಸಂಬಳ, ಅವರ ಸಿಬ್ಬಂದಿ, ಮನೆಗಳು ಕಾರುಗಳು ಇವುಗಳಿಗೆ ಹಣ ಖರ್ಚು ಮಾಡುವದಲ್ಲದೆ ಅವರ ಬೆಂಬಲಿಗರಿಗೆ ಒದಗಿಸುವ ಅನುಕೂಲತೆಗೋಸ್ಕರ ಲಕ್ಷಾಂತರ ರೂಪಾಯಿಗಳನ್ನು ಬರುವ ಹನ್ನೊಂದು ತಿಂಗಳುಗಳ ಗಾಗಿ ಖರ್ಚು ಮಾಡತಕ್ಕಂಥಾದ್ದು ನ್ಯಾಯವೇ ಅವರ ಆತ್ಮಕ್ಕಾದರೂ ಒಪ್ಪಿಗೆಯಾಗ ತಕ್ಕಂಥ ವಿಷಯವೆ? ದೇಶಕ್ಕೆ ಒಳ್ಳೆಯದನ್ನು ಮಾಡಿಲ್ಲವೆಂದು ಹಿಂದಿನ ಮಂತ್ರಿಮಂಡಲ ದಲ್ಲಿದ್ದವರನ್ನು ಯಾರನ್ನು ಕಿತ್ತುಹಾಕಿದ್ದರೋ ಅಂಥವರನ್ನೇ ಈಗ ನಿಮಗೋಸ್ಕರ ಮಂತ್ರಿ ಮಂಡಲದಲ್ಲಿ ಸೇರಿಸಿಕೊಂಡರೆ ನಿಮ್ಮ ನೀತಿ ನಿಯಮಗಳ ಬಗ್ಗೆ ಪ್ರಶ್ನೆ ಮಾಡಬೇಕಾಗುತ್ತದೆ. ನಿಮ್ಮ ಮಾತುಗಳ ಮೇಲೆ ನಂಬಿಕೆ ಇಟ್ಟುಕೊಂಡಿರುವ ಜನ ಏನು ತಿಳಿದು ಕೊಳ್ಳುತ್ತಾರೆ ಎಂಬುದನ್ನು ಆಲೋಚನೆ ಮಾಡಬೇಕಾಗಿದೆ. ಸಾರ್ವತ್ರಿಕ ಚುನಾವಣೆಯು ಹತ್ತಿರ ಬಂದಿರು ವ ಈ ಕಾಲದಲ್ಲಿ ನಿಮ್ಮ ಘೋಷಣೆಗೆ ಜನ ಏನು ಅರ್ಥಮಾಡಿಕೊಳ್ಳುತ್ತಾರೆ? ಈಗಿನ ಮುಖ್ಯ ಮಂತ್ರಿಗಳು, ಎಲ್ಲಾ ಮಾಜಿ ಮಂತ್ರಿಗಳು, ಮಾಜಿ ಮುಖ್ಯ ಮಂತ್ರಿಗಳು ಇವರೆಲ್ಲರಿಗೆ ಹುಷಾ ರಾಗಿರಿ ಎಂದು ಎಚ್ಚರಿಕೆ ಕೊಡುತ್ತೇನೆ. ಮಹಾ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಏಟು ಬೀಳುತ್ತದೆಂದು ನಾನು ಹೇಳುತ್ತೇನೆ. ಸುಖೀರಾಜ್ಯದ ಬದಲು, ಪಂಚಾಯಿತಿ ರಾಜ್ಯದ ಬದಲು, ಚುನಾವಣೆಹತ್ತಿರ ಬರುತ್ತಿರುವುದರಿಂದ ಮತ್ತೇ ಕಾಂಗ್ರೆಸ್ ರಾಜ್ಯ ಸ್ಥಾಪನೆ ಮಾಡುವದೊಕ್ಕೋಸ್ಕರ ಈ ರೀತಿ ಮಾಡಲಾಗುತ್ತಿದೆ. ಕಾಂಗ್ರೆಸ್ ರಾಜ್ಯ ಸ್ಥಾಪನೆ ಆಗ ಬೇಕೆಂದು ಚುನಾವಣೆಯ ದೃಷ್ಟಿಯಿಂದ ನಿಮ್ಮ ಪಕ್ಷದಲ್ಲಿ ಒಗ್ಗಟ್ಟು ಮಾಡಿಕೊಂಡರೆ ದೇಶ ದಲ್ಲಿ ಡೆಮಾಕ್ರಸಿ ಹೇಗೆ ನಡೆಯುತ್ತದೆ? ಇದರಿಂದ ಎಲೆಕ್ಷನ್ ಫ್ರೀಯಾಗಿ ನಡೆಯುಬಹುದೇ?

(ಶ್ರೀ ಬಿ. ಕೆ. ಪುಟ್ಟರಾಮಯ್ಯ)

ಚುನಾವಣೆಯ ಪ್ರಚಾರ ಮಾಡಲು ಅನುಕೂಲವಾಗಲು ಈ ರೀತಿ ಸರಕಾರದ ಹಣ ಖರ್ಚುಮಾಡಿ ಪ್ರತಿಯೊಂದು ಜಿಲ್ಲೆಗೆ ಒಬ್ಬ ಮಂತ್ರಿಯನ್ನು ನೇಮಕ ಮಾಡಿಕೊಂಡಿದ್ದೀರಿ. ಹೊಸ ನಾಲ್ಕು ಮಂತ್ರಿಗಳನ್ನು ಸೇರಿಸಿಕೊಂಡದ್ದು ದೇಶಕ್ಕೆ ಒಳ್ಳೆಯದಾಗ ಬೇಕೆಂದು ಅಲ್ಲ. ಆದರೆ ನಮಗೆ ಒಳ್ಳೆಯದು ಆಗುವದಕ್ಕೆ ಮಾಡಿಕೊಂಡಿದ್ದೀರಿ. ಹಿಂದಿನ ಮಂತ್ರಿಮಂಡಲದಲ್ಲಿ ಇದ್ದವರನ್ನು ಡಿಸ್‌ಮಿಸ್ ಮಾಡಿದಿರಿ ಹಿಂದಿನ ಮಂತ್ರಿಮಂಡಲದಲ್ಲಿ ಡೆಪ್ಯೂಟಿ ಮಿನಿಸ್ಟರ ಎಂದು ಕೆಲಸ ಮಾಡುವುದಕ್ಕೆ ಅರ್ಹತೆ ಇಲ್ಲವೆಂದು ಶ್ರೀ ವೀರೇಂದ್ರ ಪಾಟೀಲರನ್ನು ಏನು ಕಿತ್ತು ಹಾಕಿದ್ದೀರೋ ಅವರನ್ನೇ ಈಗ ಮಿನಿಸ್ಟರ ಎಂದು ನೇಮಕಮಾಡಿ ಸೇರಿಸಿ ಕೊಂಡಿದ್ದೀರಿ.

ಅಧ್ಯಕ್ಷರು.—ಕಿತ್ತುಹಾಕಿದವರು ಯಾರು?

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಶ್ರೀಮಾನ್ ಜತ್ತಿಯವರು ಅವರ ಪಾರ್ಟಿಯಲ್ಲಿ ಯಾವ ಗುಂಪಿನವರು ಅಧಿಕಾರದಲ್ಲಿದ್ದರೋ ಅಂಥವರು ಅಧಿಕಾರದಲ್ಲಿರುವುದು ಬೇಡವೆಂದು ಇನ್ನೊಂದು ಗುಂಪಿನವರು ಅವರನ್ನು ಕಿತ್ತುಹಾಕಿದರು.

ಅಧ್ಯಕ್ಷರು.—ಹಾಗಲ್ಲ, ಶ್ರೀ ನಿಜಲಿಂಗಪ್ಪನವರ ಮಂತ್ರಿ ಮಂಡಳವು ರಾಜೀನಾಮೆ ಕೊಟ್ಟಿದ್ದರಿಂದ ಹೊಸಮಂತ್ರಿ ಮಂಡಳವು ಶ್ರೀ ಜತ್ತಿಯವರಿಂದ ರಚಿಸಲಾಯಿತು.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಇದಕ್ಕೆ ಇವರಿಗೆ ಯಾರು ಓಟು ಮಾಡಿದರು?

Sri M. C. NARASIMHAN.—What he means is that they have been removed.

Mr. SPEAKER.—He must understand the coustitutional position. The constitutional position is that a new leader was elected by the party in power and that means that the old Ministry was done away with by the party in power.

Sri B. K. PUTTARAMIYA.—By the then dissidents.

Sri B. D. JATTI.—I was not the leader then.

Sri B. K. PUTTARAMIYA.—You were the leader to lead the opposition in the Congress. You were leading the opposition.

Sri M. RAMAPPA.—The previous Chief Minister was forced tc resign.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ನಾನು ಶ್ರೀಮಾನ್ ವೀರೇಂದ್ರ ಪಾಟೀಲರ ವಿಷಯ ಹೇಳುವಾಗ ವೈಯಕ್ತಿಕವಾಗಿ ಅವರ ವಿಚಾರ ಹೇಳುತ್ತಿಲ್ಲ. ವೈಯಕ್ತಿಕವಾಗಿ ಯಾರ ವಿಚಾರವಾಗಿಯೂ ನಾನು ಮಾತನಾಡುವವನಲ್ಲ.

ಅಧ್ಯಕ್ಷರು.—ಅವರು ಏನಾದರೂ ಹೇಳಬಹುದು. It is not a fact that Sri Veerendra Patil was removed.

Sri B. K. PUTTARAMIYA.—He was dismissed.

Mr. SPEAKER.—They themselves tendered gave resignations.

Sri B. K. PUTTARAMIYA.—It was forced on them ಅವರ ಮೇಲೆ ಅಪಾದನೆಗಳಿತ್ತು ಎನ್ನುವುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ.

Sri M. C. NARASIMHAN.—At least it must be considered that they felt to unable continue.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಮಂತ್ರಿಮಂಡಳ ಮುಂದುವರೆಯುವುದಕ್ಕೆ ಶಕ್ತಿಯಿಲ್ಲವೆಂದು ಬಿಟ್ಟು ಹೋದರು ಎಂಬುದಾಗಿಯೇ ಇಟ್ಟುಕೊಳ್ಳೋಣ. ಉಪಮಂತ್ರಿಗಳಾಗಿ ಕೆಲಸ ಮಾಡಲು ಆಗದೆ ಇದ್ದವರು ಇವತ್ತು ಮಂತ್ರಿಗಳಾಗಿ ಹೇಗೆ ಕೆಲಸ ಮಾಡುವುದು ? ನನಗೆ ಅವರ ಮೇಲೆ ವೈಯಕ್ತಿಕವಾಗಿ ಯಾವ ದ್ವೇಷವೂ ಇಲ್ಲ. ರಾಜಕೀಯವನ್ನು ಬಿಟ್ಟು ಹೊರಗೆ ಹೋದರೆ ನಾವು ಅತಿ ಹೆಚ್ಚಿನ ಸ್ನೇಹಿತರು.

Sri ALUR HANUMANTHAPPA.—The Third Plan Commences from 1st April and in view of that the Leader has taken.

Sri B. K. PUTTARAMAIYA.—I know Very well what to Speak and What not to Speak.

ನನಗೆ ಶ್ರೀಮಾನ್ ವೀರೇಂದ್ರ ಪಾಟೀಲರ ವಿಷಯ ಹೇಳುವಾಗ ಅವರು ಈಗ ಸಭೆಯಲ್ಲಿಲ್ಲ—ದೇಶದ ಹಿತ ದೃಷ್ಟಿಯಿಂದ ಹೇಳುತ್ತಿದ್ದೇನೆಯೇ ವಿನಾ ವೈಯಕ್ತಿಕವಾಗಿ ಮಾತನಾಡುತ್ತಿಲ್ಲ. ಹೊಸದಾಗಿ ನೇಮಕವಾಗಿರುವ ನಾಲ್ಕು ಜನ ಮಂತ್ರಿಗಳ ಮೇಲೂ ವೈಯಕ್ತಿಕವಾಗಿ ನನ್ನ ಆರೋಪಣೆಗಳಿಲ್ಲ ಸ್ವಂತವಾಗಿ ಹೇಳುವುದಾದರೆ ಶ್ರೀ ಮಾನ್ ವೀರಣ್ಣಗೌಡರು ನನ್ನ ಬಂಧುಗಳು. ಶ್ರೀ ಮಾನ್ ಎಚ್. ಎಸ್. ರುದ್ರಪ್ಪನವರು ಹಿಂದೆ ಮಂತ್ರಿಗಳಾಗಿದ್ದರು. ಅವರ ವಿಷಯದಲ್ಲಿ ನಾನು ಏನನ್ನೂ ಮಾತನಾಡತ್ತಿರಲಿಲ್ಲ. ಶ್ರೀ ಮಾನ್ ವೈಕುಂಠಬಾಳಿಗ ಅವರ ವಿಷಯವಾಗಿಯೂ ನಾನು ಮಾತನಾಡಿಲ್ಲ. ಅವರು ನನಗೆ ಶ್ರೇಯಸ್ಸನ್ನು ಕೋರತಕ್ಕವರು. ಶ್ರೀಮಾನ್ ವೀರೇಂದ್ರ ಪಾಟೀಲರು ಬಹಳ ಅಚ್ಚು ಮೆಚ್ಚಿನ ಸ್ನೇಹಿತರು. ಸ್ನೇಹವನ್ನು ನಾನು ರಾಜಕೀಯದಲ್ಲಿ ಮಿಶ್ರಮಾಡುತ್ತಿಲ್ಲ. ಸ್ನೇಹ ಬೇರೆ, ರಾಜಕೀಯ ಬೇರೆ. ನಾನು ಹೇಳುವುದೇನೆಂದರೆ ಈ ಒಂದು ಅವ್ಯವಸ್ಥೆ, ಅನ್ಯಾಯದ ಪರಮಾವಧಿ ಏನಿದೆ ಅದು ತೊಲಗ ಬೇಕಾದರೆ, ದೇಶಕ್ಕೆ ಶಾಂತಿಲಭಿಸ ಬೇಕಾದರೆ, ಇದು Planned election stunt ಅಲ್ಲವೆಂದು ರುಜುವಾತು ಮಾಡ ಬೇಕಾದರೆ ನಾವೆಲ್ಲ ರಾಜೀನಾಮೆಯನ್ನು ಕೊಟ್ಟು ಜನತೆಯ ಮುಂದೆ ಚುನಾವಣೆಗೆ ನಿಲ್ಲೋಣ ಜನತೆ ಏನು ತೀರ್ಮಾನ ಕೊಡುತ್ತಾರೆ. ಅವರು ಯಾರನ್ನು ಆರಿಸುತ್ತಾರೆ ಎಂಬುದನ್ನು ನೋಡೋಣ, ಜನತೆಗೆ ಇಷ್ಟವಿದ್ದರೆ ಬರಬಹುದು, ಇಷ್ಟವಿಲ್ಲದೆ ಇದ್ದರೆ ಬರದೆ ಇರಬಹುದು ಅದಿಲ್ಲದೆ ಸರ್ಕಾರದ ಹಣವನ್ನು ಬರೀ ಚುನಾವಣೆ ಉದ್ದೇಶಗಳಿಗೆ ಉಪಯೋಗಿಸುವುದಕ್ಕೆ ದಾರಿ ಮಾಡಬಾರದೆಂದು ಹೇಳುತ್ತಿದ್ದೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಚುನಾವಣೆಗಳು ಹತ್ತಿರ ಬರುತ್ತಿವೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಚುನಾವಣೆಗಳು ಹತ್ತಿರ ಬರುತ್ತಿವೆ ಎಂದು ಸರ್ಕಾರದ ಹಣವನ್ನು ದುರ್ವ್ಯಯ ಮಾಡುವುದಕ್ಕೆ ಹೊರಟಿರುವುದು ಚುನಾವಣೆಗಳಲ್ಲಿ ಅನುಕೂಲ ಮಾಡಿಕೊಳ್ಳುವುದುಕ್ಕೋಸ್ಕರ ಮಂತ್ರಿಮಂಡಲದ ವಿಸ್ತರಣೆ ಮಾಡಿರುವುದು ಅನ್ಯಾಯದ ಪರಮಾವಧಿ ಇವರು ನಿಸ್ಪೃಹರಾಗಿದ್ದರೆ, ಚುನಾವಣೆಗಳಿಗೋಸ್ಕರ ಮಂತ್ರಿ ಮಂಡಳವನ್ನು ವಿಸ್ತರಿಸಿಲ್ಲ ಎಂದು ಹೇಳುವುದಾದರೆ ಎಲ್ಲರೂ ರಾಜೀನಾಮೆ ಕೊಟ್ಟು ಜನತೆಯ ಮುಂದೆಹೋಗೋಣ ಜನತೆಯ ಅಭಿಪ್ರಾಯ (Verdict) ಏನಿದೆಯೋ ಹಾಗೆ ಮಾಡೋಣ ಚುನಾವಣೆಗಳಿಗೆ ಸರ್ಕಾರದ ಯಂತ್ರವನ್ನು ಉಪಯೋಗಿಸುವುದು ಸರಿಯಲ್ಲ. ಕೇರಳದ ಕಮ್ಯುನಿಸ್ಟರು ಸರ್ಕಾರದ ಆಡಳಿತ ಯಂತ್ರವನ್ನು ಚುನಾವಣೆಗಳಿಗೆ ಉಪಯೋಗಿಸುತ್ತಾರೆ ಎನ್ನುವ ಆರೋಪವಿತ್ತು. ಕೇರಳದಲ್ಲಿ ಕಾಂಗ್ರೆಸ್ ಮತ್ತು ಪ್ರಜಾಸೋಷಿಯಲಿಸ್ಟ್ ಪಕ್ಷಗಳ ಮೈತ್ರಿಯಾಗಿ ಅಧಿಕಾರದಲ್ಲಿದೆ. ನಮ್ಮ ಪಕ್ಷದವರೆ, ಮುಖ್ಯ ಮಂತ್ರಿಗಳಾಗಿದ್ದರೂ ಅವರು ಹಾಗೆ ಮಾಡುತ್ತಿಲ್ಲ ; ಸರ್ಕಾರದ ಯಂತ್ರವನ್ನು ಆಡಳಿತದ ಅಂಗವನ್ನು ಚುನಾವಣೆಗಳಿಗೋಸ್ಕರ ಉಪಯೋಗಿಸಿಕೊಳ್ಳುತ್ತ ಇಲ್ಲ, ಅಂಥ ಒಂದು ದೂರನ್ನು ಕಮ್ಯೂನಿಸ್ಟರು ಸಹ ಹೇಳುತ್ತಿಲ್ಲ. ಕೇರಳದಲ್ಲಿ ಮುಖ್ಯ ಮಂತ್ರಿಯವರಾದ ಪಟ್ಟಂತಾನು ಪಿಳ್ಳೆಯವರು ಸರ್ಕಾರದ ಸಹಾಯವನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆಂದು

(ಶ್ರೀ ಬಿ. ಕೆ. ಪುಟ್ಟರಾಮಯ್ಯ)

ವಿರೋದ ಪಕ್ಷದವರಿಂದ ಕಮ್ಯೂನಿಸ್ಟ್ ಮಿತ್ರರು ಹೇಳುತ್ತ ಇಲ್ಲ. ಜನಗಳಲ್ಲಿ ನಮ್ಮ ಗೌರವವಿದ್ದರೆ, ನಮ್ಮನ್ನು ದೇಶದಲ್ಲಿ ಯಾರು ದೊಡ್ಡವರಾಗಿ ಮಾಡಿದರೋ ಅವರ ಮೇಲೆ ಭಕ್ತಿ ಇದ್ದರೆ, ಯಾರಿಂದ ಈ ಸ್ಥಾನ ಮಾನಗಳಿಗೆ ಬಂದಿದ್ದೇವೆ ಎನ್ನುವ ವಿವೇಚನೆ ಇದ್ದರೆ ಈ ರೀತಿ ಜನತೆಯ ಮೇಲೆ ಹೊರೆಯನ್ನು ಹೊರಿಸುತ್ತಿರಲಿಲ್ಲ. ಜನತೆಗೆ ಇದೆಲ್ಲ ಗೊತ್ತಾಗುತ್ತದೆ.

ರಾಜ್ಯಪಾಲರ ಭಾಷಣದಲ್ಲಿ, ಪ್ರತಿಸಾರಿಯೂ, ಅನುಸೂಚಿತ ಜಾತಿಗಳನ್ನು ಉಧ್ಧಾರ ಮಾಡಬೇಕೆಂದು ಹೇಳುತ್ತಾರೆ.

Sri. N. Rachaiah (Minister for Social Welfare, Agriculture and Excise).—It is recognised in The Constitution.—

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ರಾಜ್ಯಾಂಗದಲ್ಲಿ ಹೇಳಿರುವುದನ್ನು ರಾಜ್ಯಪಾಲರ ಭಾಷಣದಲ್ಲಿ ಬರೆಯುತ್ತಾರೆ, ಅನುಸೂಚಿತ ಜಾತಿಗಳೆಂದರೆ ಹಿಂದುಳಿದ ಜನ, ಬಹಳ ಹಿಂದೆ ಬಿದ್ದಿದಾರೆ. ಇವರು ದೇಶದ ಜನಸಂಖ್ಯೆಯಲ್ಲಿ ಸುಮಾರು ಕಾಲುಭಾಗದಷ್ಟಿದ್ದಾರೆ, ಅವರ ಅವರ ಅಭಿವೃದ್ಧಿಗೆ ಪ್ರತ್ಯೇಕವಾಗಿ ಒಬ್ಬರು ಮಂತ್ರಿಗಳಿಲ್ಲ ಮಂತ್ರಿಮಂಡಳವನ್ನು ವಿಸ್ತರಿಸುವಾಗ ಆ ಜನಾಂಗದಿಂದ ಒಬ್ಬರನ್ನಾದರೂ ತೆಗೆದುಕೊಂಡಿದ್ದರೆ ಏನೋ ಒಂದು ಸಮಾಜಾಯಿಯನ್ನು ಹೇಳುವುದಕ್ಕಾದರೂ ಸಾಧ್ಯವಾಗುತ್ತಿತ್ತು ಆಜನಾಂಗವನ್ನು ಉದ್ಧಾರ ಮಾಡುವುದಕ್ಕೆ ಒಂದೂವರೆ ಮಂತ್ರಿಗಳನ್ನು ಮಾಡಿಟ್ಟಿದ್ದಾರೆ. ಈಗ ಅನುಸೂಚಿತ ಜಾತಿಗಳಿಂದ ಒಬ್ಬಮಂತ್ರಿಗಳನ್ನಾದರೂ ತೆಗೆದುಕೊಂಡು, ಆಜನಾಂಗದ ಉದ್ಧಾರ ಮಾಡುವುದಕ್ಕೆ ಅನುಕೂಲ ಮಾಡಬಹುದಾಗಿತ್ತು. ಅವರು ಬಹಳ ಹಿಂದುಳಿದ ಜನ ಎಂದು ಪಶ್ಚಾತ್ತಾಪದಿಂದ ಹೇಳುತ್ತೇನೆ. ಬರೀ ಪಶ್ಚಾತ್ತಾಪದಿಂದ ಏನು ಪ್ರಯೋಜನ, ಅವರಿಗೆಲ್ಲ ಸರ್ಕಾರದವರು ಹೆಂಚುಗಳು ಮುಂತಾದುವನ್ನೆಲ್ಲಾ ಕೊಡುತ್ತಾರೆಂದು ಹೇಳಿದರು. ನಿಜ ಕೊಡುತ್ತಾರೆ ಅದು ಒಂದು Stunt. ಚುನಾವಣೆಗೋಸ್ಕರ ಇಂಥದ್ದನ್ನೆಲ್ಲ ಉಳಿಸಿಕೊಂಡಿದ್ದಾರೆ. ಮುಂದಿನ ವರ್ಷದಿಂದ ಇದನ್ನು ನಿಲ್ಲಿಸುತ್ತಾರೆಂದು ತಿಳಿಯಿತು. ಅವರಿಗೆ ಮನೆಯಿಲ್ಲ ಗದ್ದೆಯಿಲ್ಲ., ಸರ್ಕಾರದವರು ಕೊಟ್ಟ ಹಣ, ಹೆಂಚು, ಗಳಗಳಿಂದ ಒಂದು ಮನೆಯನ್ನು ಕಟ್ಟಿಕೊಂಡು ಅದನ್ನು ಬಿಟ್ಟು ಹೋಗಲಾರದೆ ಕೂಲಿಯಾಳುಗಳಾಗಿರುತ್ತಾರೆ ಸರ್ಕಾರದ ಸಹಾಯವನ್ನು ಪಡೆದುಕೊಂಡ ತಪ್ಪಿಗೆ ಹೆಂಚುಗಳನ್ನು ಕಾದುಕೊಂಡು ಖಾಯಂ ನೌಕರರಾಗಿರುವಂತೆ ಮಾಡಿದ್ದಾರೆ. ಇದುವರೆಗೂ ಹರಿಜನೋದ್ಧಾರ ಎಂದು ಅವರನ್ನು ಖಾಯಂ ನೌಕರರಾಗಿ ಮಾಡಲಾಗಿದೆ ಇದರಿಂದ ಬಿಡುಗಡೆ ಮಾಡುವುದಕ್ಕಾಗಿ ಒಂದು ಮಂತ್ರಿ ಸ್ಥಾನವನ್ನು ಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು. ಹಾಗೆನಾದರೂ ಮಾಡಿದ್ದಾರೆಯೇ ? ಏನೂ ಇಲ್ಲ. ಆಜನಾಂಗದವರು ಬುದ್ಧಿವಂತರಲ್ಲ. ಈ ಸಭೆಯಲ್ಲಿ ಬಹುಶಃ ನನಗೆ ತಿಳಿದಂತೆ 26 ಜನ ಹರಿಜನ ಸದಸ್ಯರು ಇರುತ್ತಾರೆ. ಇಂತಹ ಸದಸ್ಯರಲ್ಲಿ ಒಬ್ಬರನ್ನಾದರೂ ಮಂತ್ರಿಗಳಾಗಿ ಈಗ ತೆಗೆದು ಕೊಂಡಿದ್ದಾರೆಯೇ ಎಂದರೆ: ಅದೂ ಕೂಡಇಲ್ಲ. ಈ ರೀತಿಯಾಗಿ ಮಂತ್ರಿಗಳನ್ನು ಹೆಚ್ಚುಮಾಡಿಕೊಂಡರೆ ದೇಶದ ಅಭಿವೃದ್ಧಿ ಮಾಡಿದ ಹಾಗಾಗುತ್ತದೆಯೇ? ನಿಮಗೆ ದೇಶವನ್ನು ಅಭಿವೃದ್ಧಿ ಮಾಡುವ ಮನಸ್ಸಿದೆಯೇ? ನಿಮ್ಮ ಪಕ್ಷದ ಅಭಿವೃದ್ಧಿ ಮಾಡುವುದಕ್ಕೋಸ್ಕರವಾಗಿ ಎರಡು ಮೂರು ವರ್ಷಗಳ ಕಾಲವನ್ನು ಕಳೆದಿದ್ದೀರಿ. ಆದುದರಿಂದ ನಾನು ಹೇಳುವುದು ಈ ಸಭೆಯಲ್ಲಿರುವ ಎಲ್ಲರೂ ರಾಜೀನಾಮೆ ಕೊಟ್ಟು ಪುನಃ ಮತದಾರರ ಬಳಿಗೆ ಹೋಗಿ ಅವರ ತಿರ್ಮಾನಕ್ಕೆ ಬದ್ಧರಾಗೋಣ ಇದನ್ನು ಆಡಳಿತ ಪಕ್ಷದವರು ಒಪ್ಪಬೇಕೆಂದು ಹೇಳುತ್ತೇನೆ. ಈಗಿರುವ ಆಡಳಿತ ಪಕ್ಷದಿಂದ ದೇಶದ ಜನಕ್ಕೆ ಅಭಿವೃದ್ಧಿಯಾಗುತ್ತಿಲ್ಲ. ಇದರಲ್ಲಿ ಅನುಮಾನವೇ ಇಲ್ಲ. ಇಷ್ಟೊಂದು ವಿಷಯಗಳನ್ನು ಹೇಳಿ, ರಾಜ್ಯಪಾಲರು ಸರಕಾರದ ವಿಚಾರದಲ್ಲಿ ಆಡಿರುವ ವಿಷಯಗಳಲ್ಲಿ ಏನೇನು ಮಾಡಿದ್ದಾರೆ ಅದರ ಬಗ್ಗೆ ಒಂದೆರಡು ಮಾತುಗಳನ್ನು ಇಲ್ಲಿ ನಾನು ಹೇಳಬೇಕಾಗಿದೆ.

ರಾಜ್ಯಪಾಲರ ಭಾಷಣದಲ್ಲಿ ಸ್ಥಳಿಯ ಸಂಸ್ಥೆಗಳ ಚುನಾವಣೆಗಳು ಮತ್ತು ತಾಲ್ಲೂಕು ಬೋರ್ಡುಗಳ ಚುನಾವಣೆಗಳು ಮುಗಿದವು ಎಂದು ಹೇಳಿದರು. ಎಲ್ಲಿ ಮುಗಿದಿದೆ ಸ್ವಾಮಿ? ರಾಜ್ಯಪಾಲರ ಭಾಷಣದಲ್ಲಿ, ಪುಟ (4) ರಲ್ಲಿ

